ಕಾರ್ಪೊರೇಷನ್‌ರವರು ಗಾರ್ಡನ್ ಮಾಡುವ ಉದ್ದೇಶ ಇದೆ. ಅವರ ಜೊತೆಯಲ್ಲಿ ಮಾತನಾಡಿ ಆರು ಎಕರೆ ಬಿಡುತ್ತಾ ಇದ್ದಾರೆ. ಆ ಆರು ಎಕರೆಯಲ್ಲಿ ಮಾಡಬೇಕೆಂದು ನಿರ್ಣಯ ಇದೆ. ಅವರೂ ಕೂಡ ಒಪ್ಪುತ್ತಾರೆ. 20 ಕಿ.ಮಿ. ದೂರದಲ್ಲಾದರೆ ಯಾರೂ ಒಪ್ಪುವುದಿಲ್ಲವೆಂಬುದು ಅವರಿಗೂ ಗೊತ್ತಿದೆ.

ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು :

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಹಾಗೂ ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ 12.7.2005ರ 28ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 173 ಪ್ರಶ್ನೆಗಳ ಪೈಕಿ 113 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ (ಅನುಬಂಧ–1).

ಅಧ್ಯಕ್ಷರು : ಮಂಡಿಸಲಾಗಿದೆ.

2. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ :

ವಿಷಯ : ಕಳಸಾ ಬಂಡೂರಿ ನಾಲೆಗೆ ಮಲಪ್ರಭಾ ನದಿ ನೀರು ಕೊಡುವ ಬಗ್ಗೆ ನರಗುಂದ–ನವಲಗುಂದದಲ್ಲಿ ಬಗ್ಗೆ ಹೋರಾಟ ನಡೆಯುತ್ತಿರುವುದರ ಬಗ್ಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ ನಾನೊಂದು ನಿಲುವಳಿ ಸೂಚನೆಯನ್ನು ನಿಮಗೆ ಕಳುಹಿಸಿಕೊಟ್ಟಿದ್ದೇನೆ. ಬಹಳ ದೊಡ್ಡ ಹೋರಾಟ ಇವತ್ತು ನರಗುಂದ ನವಲಗುಂದದಲ್ಲಿ ನಡೆಯುತ್ತಿದೆ. ಕಳಸಾ ಬಂಡೂರಿ ನಾಲಾ ಯೋಜನೆ ಒಂದಲ್ಲ ಒಂದು ಕಾರಣಕ್ಕೆ ಮಹದಾಯಿ ಕಣಿವೆಯಿಂದ ಕಳಸಾ ಬಂಡೂರಿ ನಾಲೆಗೇನು ಮಲಪ್ರಭಾ ನದಿ ಮಾರ್ಗವಾಗಿ 8 ಟಿ.ಎಂ.ಸಿ. ನೀರು ಕೊಡಬೇಕಾಗಿತ್ತೋ ಈ ಬಗ್ಗೆ ಅನೇಕ ವರ್ಷಗಳಿಂದ ಹೋರಾಟಗಳು ನಡೆಯುತ್ತಿವೆ. ಇವತ್ತು ನಾನು ಮುಖ್ಯಮಂತ್ರಿಗಳು ಹಾಗೂ ನೀರಾವರಿ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ ಕೇಂದ್ರ ಸರ್ಕಾರ ಗೋವಾ ಸರ್ಕಾರ ಹಾಗೂ ಕರ್ನಾಟಕ ಸರ್ಕಾರ ಒಂದೇ ಪಕ್ಷದ ಸರ್ಕಾರ ಹೊಂದಿರುವಂತಹ ಸಂದರ್ಭ. ಒಂದಲ್ಲ ಒಂದು ಕಾರಣಕ್ಕೆ ಇದಕ್ಕೆ ರಾಜಕೀಯ ಬೆರೆತು ಇದುವರೆವಿಗೂ ತೀರ್ಮಾನವಾಗದೇನೇ ಯೋಜನೆ ಆಗಲಿಲ್ಲ. ಕಳೆದ 60 ದಿನಗಳಿಂದ ನರಗುಂದದಲ್ಲಿ ಪ್ರತಿನಿತ್ಯ ಎರಡು ಊರಿನ

ರೈತರು ಸರದಿ ಉಪವಾಸ ಮಾಡುತ್ತಾ ಇದ್ದಾರೆ. ಈವತ್ತು ವ್ಯಾಪಾರ ವಹಿವಾಟುಗಳನ್ನು ರದ್ದುಮಾಡಿ ಲಯನ್ಸ್ ರೋಟರಿ ಬೇರೆಲ್ಲಾ ಸಂಘಸಂಸ್ಥೆಗಳು ಸ್ವಯಂಪ್ರೇರಣೆಯಿಂದ ನರಗುಂದ ಬಂದ್‌ಗೂ ಕರೆ ಕೊಟ್ಟಿದ್ದಾರೆ. ತಮಗೆ ಗೊತ್ತಿದೆ 1980ರ ಜುಲೈ 21ರಲ್ಲಿ ಆ ಗುಂಡೂರಾವ್ ಸರ್ಕಾರ ಇದ್ದಾ ನರಗುಂದದಲ್ಲಿ ಒಂದು ಗೋಲಿಬಾರಾಗಿ ಆ ಸರ್ಕಾರವೇ ಮನೆಗೆ ಹೋಗುವಂತಹ ಪರಿಸ್ಥಿತಿ ಒಂದು ಬಂದಿತ್ತು. ಈಗ ಕಾನೂನು ಸುವ್ಯವಸ್ಥೆ ಹದಗೆಟ್ಟು ಅದೇ ರೀತಿಯ ವಾತಾವರಣ ನಿರ್ಮಾಣವಾಗುತ್ತಾ ಇದೆ. ಇದರ ಬಗ್ಗೆ ವಿವರವೇನೂ ಅಗತ್ಯವಿಲ್ಲ. ಮಹದಾಯಿ ನದಿ ನೀರನ್ನು ಕಳಸನಾಲಾ ಮತ್ತು ಬಂಡೂರಿನಾಲಾ ಮುಖಾಂತರ ಮಲಪ್ರಭಾ ನದಿಗೆ ತಿರುಗಿಸುವುದನ್ನು ಕಳಸಾಬಂಡೂರಿ ನಾಲಾ ಎಂದು ಕರೆಯುವುದು ನಿಮಗೆಲ್ಲಾ ಗೊತ್ತಿದೆ. ಈ ಕಳಸನಾಲಾ ತಿರುವಿಗೆ 2000ನೇ ಸಾಲಿನಲ್ಲಿ ಸುಮಾರು 44.78 ಕೋಟಿ ರೂಪಾಯಿ ಅಂದಾಜಿಗೆ ಮತ್ತು ಬಂಡೂರಿ ನಾಲಾ ತಿರುವಿಗೆ 2000ನೇ ಸಾಲಿನಲ್ಲಿ 49.20 ಕೋಟಿ ರೂ. ಅಂದಾಜಿಗೆ ಕರ್ನಾಟಕ ಸರ್ಕಾರ ಅನುಮೋದನೆಯನ್ನೂ ಕೊಟ್ಟಿದೆ. ಇದನ್ನು ಮಾಡಬೇಕೆಂದು ತೀರ್ಮಾನಮಾಡಿ ಕಳಸಾ ಹಾಗೂ ಬಂಡೂರಿ ನಾಲೆಗಳಿಗೆ ಹಣವನ್ನೂ ತೆಗೆದಿಟ್ಟು ಮಂಜೂರಾತಿಯನ್ನು ನೀವು ಕೊಟ್ಟಿದ್ದೀರಿ. ಆದರೆ ಗೋವಾ ಮತ್ತು ಕರ್ನಾಟಕಗಳ ನಡುವೆ ವಿವಾದ ಪ್ರಾರಂಭವಾಗಿ ಈ ಎರಡೂ ಯೋಜನೆಗಳಿಗೆ ಒಂದಲ್ಲ ಒಂದು ಕಾರಣಕ್ಕೆ ಗೋವಾ ರಾಜ್ಯ ತಕರಾರು ತರುತ್ತಿರುವುದು ಎಲ್ಲರಿಗೂ ಗೊತ್ತಿರುವಂತಹ ಸಂಗತಿ. ಈ ಗೋವಾ ಸರ್ಕಾರದ ತಕರಾರಿನಿಂದ ಕೇಂದ್ರ ನೀರಾವರಿ ಕಮಿಷನರ್‌ರವರು 7.56 ಟಿ.ಎಂ.ಸಿ. ನೀರನ್ನು ಕರ್ನಾಟಕ ಉಪಯೋಗಿಸಿಕೊಳ್ಳಬಹುದು ಎಂದು ಕೊಟ್ಟ ಅನುಮೋದನೆಯ ಮೇರೆಗೆ ತಡೆಯಾಜ್ಞೆ ಇದೆ. ಅಧ್ಯಕ್ಷರೇ, ಇದು ಅತ್ಯಂತ ಅಗತ್ಯ ಇರುವಂತಹದು, ವ್ಯರ್ಥವಾಗಿ ಸಮುದ್ರಕ್ಕೆ ನೀರು ಹರಿದುಹೋಗುತ್ತಾ ಇದೆ. ಧಾರವಾಡ, ಹುಬ್ಬಳ್ಳಿ ಮುಂತಾದ ನಗರಗಳಿಗೆ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಬಹುದಾಗಿದೆ. ಅಂದೆ ಕರ್ನಾಟಕಕ್ಕೆ ಅನುಮತಿ ಕೊಟ್ಟಿದ್ದಕ್ಕೆ ತಡೆಯಾಜ್ಞೆ ನೀಡಿದಂತಹ ಸಂದರ್ಭ ಇವತ್ತಿದೆ. ಮತ್ತೆ ಆ ನಾಲೆ ಪ್ರದೇಶದಲ್ಲಿ ಅರಣ್ಯವಿದೆ ಎಂಬ ತಕರಾರು ಬಂದಾಗ ಅರಣ್ಯ ಸಲಹಾ ಸಮಿತಿ ತಾ: 28.08.03 ರಲ್ಲಿ ಒಂದು ಸಭೆ ನಡೆಸಿ ನೀಡಿದ

ಶಿಫಾರಸ್ಸಿನಂತೆ ಭಾರತ ಸರ್ಕಾರ 26.09.2003ರಲ್ಲಿ ಕರ್ನಾಟಕಕ್ಕೆ ಗೋವಾ ರಾಜ್ಯದೊಂದಿಗೆ ನೀರಿನ ವಿವಾದ ಬಗೆಹರಿಸಿಕೊಂಡು ಕೇಂದ್ರ ಸರ್ಕಾರವನ್ನು ಸಂಪರ್ಕ ಮಾಡಿರಿ ಎಂದು ಪತ್ರವನ್ನೂ ಬರೆದಿದ್ದಾರೆ. ಇಂತಹ ಸಂದರ್ಭ ಇದ್ದರೂ ಸಹ ಇದುವರೆಗೆ ನಮ್ಮ ಸರ್ಕಾರ ವಿಶೇಷವಾದಂಥ ಗಮನ ಕೊಟ್ಟು ಕಳಸಾ ಬಂಡೂರಿ ಯೋಜನೆಯನ್ನು ಜಾರಿಗೆ ತರುವುದರಲ್ಲಿ ಸಂಪೂರ್ಣ ವಿಫಲವಾಗಿದೆ. ಮತ್ತೆ ಕೇಂದ್ರದಿಂದ 26.09.2003ರಲ್ಲಿ ಪತ್ರ ಬಂದು ಒಂದು ವರ್ಷ 9 ತಿಂಗಳಾದರೂ ಸಹ ಕರ್ನಾಟಕ ರಾಜ್ಯ ಗೋವಾ ಜೊತೆ ಮಾತುಕತೆಯಾಡಿ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವಂತಹ ಯಾವುದೇ ಪ್ರಾಮಾಣಿಕ ಪ್ರಯತ್ನ ಇಲ್ಲ. ತಮಗೆ ಗೊತ್ತಿದೆ. ಅಕಸ್ಮಾತ್ ಇದು ಆಗಲೇ ಇಲ್ಲ ಎಂದಿದ್ದರೆ ನಮಗೆ ಆ ರಾಜಕೀಯ ಇಚ್ಛಾಶಕ್ತಿ ಇದ್ದಿದ್ದರೆ ಕರ್ನಾಟಕ ಅಂತರರಾಜ್ಯ ಜಲ ಟ್ರಿಬ್ಯೂನಲ್ ಮುಂದೆ ಇದನ್ನು ಕೇಳಿದ್ದಿದ್ದರೆ ನಿಯಮಾವಳಿ ಪ್ರಕಾರ ಎರಡು ವರ್ಷದೊಳಗೆ ಟ್ರಿಬ್ಯೂನಲ್ ಒಂದು ತೀರ್ಪು ಕೊಡುತ್ತಿತ್ತು. ಅದರಿಂದ ಇಷ್ಟುಹೊತ್ತಿಗಾಗಲೇ ಒಂದು ದಿವಸ ತಡ ಮಾಡದೆ ಆ ಯೋಜನೆ ಪ್ರಾರಂಭ ಮಾಡಬಹುದಿತ್ತು. ನಾವು ಟ್ರಿಬ್ಯೂನಲ್ ಮುಂದೆ ಹೋಗಲಿಲ್ಲ, ಎರಡನೆಯದು ಗೋವಾ ಸರ್ಕಾರವನ್ನು ಮನವೊಲಿಸುವ ಪ್ರಯತ್ನವನ್ನೂ ಮಾಡಲಿಲ್ಲ. ಬರೀ ಪತ್ರ ಬರೆದು ಒಂದಲ್ಲ ಒಂದು ಕಾರಣಕ್ಕೆ ಇವತ್ತು ಈ ಯೋಜನೆ ಜಾರಿಗೆ ಬರಲಿಲ್ಲ. ದೊಡ್ಡ ಅನಾಹುತವಾಗಿದೆ; ಸಮಸ್ಯೆಯಾಗಿದೆ, ಕುಡಿಯುವ ನೀರಿನ ಹಾಹಾಕಾರವಿದೆ; ಇಂತಹ ಸಂದರ್ಭದಲ್ಲಿ ನೀವೇನಾದರೂ ನಿರ್ಧಿಷ್ಟವಾಗಿ ಗೋವಾ ಸರ್ಕಾರದ ಮನವೊಲಿಸಿ ಇವತ್ತೇನು ದೊಡ್ಡ ಹೋರಾಟವಾಗುತ್ತಾ ಇದೆ, ಆ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಕೇಂದ್ರ ಹಾಗೂ ಗೋವಾ ಜೊತೆ ಮಾತನಾಡಿ ಕಾರ್ಯಪ್ರವೃತ್ತರಾಗುತ್ತೀರಾ? ಇದುವರೆಗೆ ನೀವು ಬರೆದ ಪತ್ರಗಳಿಗೆ ಏನೆಂದು ಉತ್ತರ ಬಂದಿದೆ? ಆ ದಿಕ್ಕಿನಲ್ಲಿ ನಿಮ್ಮ ಪ್ರಯತ್ನವೇನು. 60 ದಿವಸದಿಂದ ಹಗಲು ರಾತ್ರಿ ಎರಡೆರಡು ಹಳ್ಳಿಯವರು ನಿರಂತರವಾಗಿ ಸತ್ಯಾಗ್ರಹ ಮಾಡುತ್ತಿದ್ದರೂ ಇದುವರೆಗೂ ಹೋಗಿ ಸರ್ಕಾರ ಮಾತುಕತೆ ಆಡುವುದಕ್ಕಿಂತ ಹೆಚ್ಚಾಗಿ ಈ ಸಮಸ್ಯೆಗೆ ಪರಿಹಾರ ಹುಡುಕುವ ಪ್ರಾಮಾಣಿಕ ಪ್ರಯತ್ನವಾಗಲಿಲ್ಲ. ಈ ಮನೆಯಲ್ಲಿ ಕಳೆದ ಹತ್ತಾರು ವರ್ಷಗಳಿಂದ ಈ ಬಗ್ಗೆ ಒಂದಲ್ಲ ಒಂದು ರೀತಿ ಚರ್ಚೆ ಮಾಡಿದ್ದೇವೆ. ಅದಕ್ಕೆ ನಾನು ನೀರಾವರಿ

ಸಚಿವರಲ್ಲಿ ವಿನಂತಿ ಮಾಡುವುದು : ಇವತ್ತು ಅಲ್ಲಿ ಸತ್ಯಾಗ್ರಹ ನಿಲ್ಲಬೇಕು. ಈ ಕಳಸಾಬಂಡೂರಿ ನಾಲಾ ಯೋಜನೆ ಜಾರಿಗೆ ಬರಬೇಕು. ಆ ದಿಕ್ಕಿನಲ್ಲಿ ಸರ್ಕಾರ ಏನೇನು ಕ್ರಮ ತೆಗೆದುಕೊಂಡಿದೆ ಎಂದು ಹೇಳಿದರೆ ಮುಂದೆ ಅದಕ್ಕೆ ವಿವರಣೆ ಕೇಳಬಹುದು ಮತ್ತು ಯಾವರೀತಿ ಮಾಡಿ ಮುಗಿಸಬಹುದು ಎಂದು ಹೇಳಬಹುದು, ಇಲ್ಲದೇಹೋದರೆ ಆ ಸತ್ಯಾಗ್ರಹ ಬೇರೆ ರೂಪ ಪಡೆದು ಕಾನೂನು ಸುವ್ಯವಸ್ಥೆಗೆ ಧಕ್ಕೆಯಾದರೆ ಸರ್ಕಾರವೇ ಜವಾಬ್ದಾರರು ಆಗಬೇಕಾಗುತ್ತದೆ. ಆ ಭಾಗದ ಸಿ.ಸಿ. ಪಾಟೀಲರು ಎಲ್ಲಾ ಇದಕ್ಕೆ ಸಹಿ ಮಾಡಿದ್ದಾರೆ.

ಅಧ್ಯಕ್ಷರು : ಇದನ್ನು 69 ನಿಯಮಾವಳಿಗೆ ಪರಿವರ್ತಿಸಿದ್ದೇನೆ. ಬೇಗ ಮುಗಿಸಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಆಗಬಹುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈಗಲೇ ಚರ್ಚೆಯಾದರೆ ಉತ್ತರ ಕೊಡಲು ನಮಗೆ ಟೈಂ ಬೇಕಲ್ಲಾ. ನಾವು ಎಲ್ಲವನ್ನೂ ನಿಮಗೆ ತಿಳಿಸಿದ್ದೇವೆ ಆದರೂ ನೀವು ಮಾಡುತ್ತೀರಲ್ಲಾ, ನನ್ನ ಜಾಗದಲ್ಲಿ ನೀವಿದ್ದರೂ ಕೂಡ ಅದೇ ಹೇಳುತ್ತಿದ್ದಿರಿ.

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ – ಗ್ರಾಮಾಂತರ) : ಅಧ್ಯಕ್ಷರೆ, ಅಲ್ಲಿ 60 ದಿವಸದಿಂದ ಹೋರಾಟ ನಡೆದಿದೆ. ಮಹದಾಯಿ ಮಲಪ್ರಭಾ ಜೋಡಣೆ ಯೋಜನೆ ಏನಿದೆ ಅದರಿಂದ 45 ಟಿ.ಎಂ.ಸಿ. ನೀರು ಪಡೆಯುವ ಹಕ್ಕು ಕರ್ನಾಟಕಕ್ಕೆ ಇದೆ. ಕಳಸಾ ಬಂಡೂರಿ ನಾಲೆಯನ್ನು ಮಲಪ್ರಭಾಕ್ಕೆ ಜೋಡಣೆ ಮಾಡುವ ಮೂಲಕ 7.56 ಟಿ.ಎಂ.ಸಿ. ನೀರು ಮಲಪ್ರಭಾ ನದಿಗೆ ಹೆಚ್ಚುವರಿಯಾಗಿ ಬರಲು ಸಾಧ್ಯವಿದೆ. ಇದರಿಂದ 4 ಜಿಲ್ಲೆಗಳಿಗೆ ಉಪಯೋಗವಾಗುವುದು. ಬೆಳಗಾಂ, ಧಾರವಾಡ, ಗದಗ ಮತ್ತು ಬಾಗಲಕೋಟೆ ಜಿಲ್ಲೆಗಳು; ಎಂಟುಹತ್ತು ತಾಲ್ಲೂಕುಗಳಿಗೆ ಇದು ಉಪಯೋಗವಾಗುತ್ತದೆ. ಇವತ್ತು ಹುಬ್ಬಳ್ಳಿ, ಧಾರವಾಡ ನಗರದಲ್ಲಿ ಹತ್ತು ದಿವಸಕ್ಕೊಮ್ಮೆ ಕುಡಿಯುವ ನೀರು ಕೊಡಲಾಗುತ್ತಿದೆ. ಅಕ್ಕಪಕ್ಕದ ನರಗುಂದ ಇರಬಹುದು, ನವಲಗುಂದ ಇರಬಹುದು, ಈ ನಾಲ್ಕು ಜಿಲ್ಲೆಗಳಲ್ಲಿ ನೂರಾರು ಗ್ರಾಮಗಳಿಗೆ ಕುಡಿಯುವ ನೀರಿನ ಸಮಸ್ಯೆ ನಿವಾರಣೆ ಮಾಡಲು ಸಾಧ್ಯವಿದೆ. ನೂರಾರು ನಗರಪಟ್ಟಣಗಳ ಕುಡಿಯುವ ನೀರಿನ ತೊಂದರೆ ನಿವಾರಣೆ

ಮಾಡಲು ಸಾಧ್ಯವಿದೆ. ಈವತ್ತು ಮಲಪ್ರಭಾ ನದಿಯಲ್ಲಿ ನೀರು ಕಡಿಮೆಯಾದ್ದರಿಂದ ಟೇಲ್ ಎಂಡ್ ರೈತರಿಗೆ ಇವತ್ತು ನೀರು ಸಿಗುತ್ತಾ ಇಲ್ಲ. ಆದ್ದರಿಂದ ಕಳಸಾ ಬಂಡೂರಿ ನಾಲೆ ಯೋಜನೆ ಮೂಲಕ ಆ ಭಾಗದ ಅಭಿವೃದ್ಧಿಗೆ ಅನುಕೂಲವಾಗುತ್ತದೆ. ಹಿಂದೆ 2002ರಲ್ಲಿ ಆಗಿನ ಎನ್.ಡಿ.ಎ. ಸರ್ಕಾರ ಇದಕ್ಕೆ ಒಪ್ಪಿಗೆ ಕೊಟ್ಟಿತ್ತು. ಆದರೆ ಗೋವಾ ಸರ್ಕಾರ ತಕರಾರು ಮಾಡಿದ್ದರಿಂದ ಆ ಒಪ್ಪಿಗೆಗೆ ತಡೆಯಾಜ್ಞೆ ಕೊಡುವುದು ಆಯಿತು. ಆ ತಡೆಯಾಜ್ಞೆ ಬಂದ ಮೇಲೆ ಇಲ್ಲಿವರೆಗೂ ಅದನ್ನು ತೆರವುಗೊಳಿಸುವ ಕೆಲಸ ಆಗುತ್ತಾ ಇಲ್ಲ. ಇವತ್ತು ರಾಜ್ಯ ಸರ್ಕಾರ ಹಲವಾರು ವಿಷಯಗಳಲ್ಲಿ ಸರ್ವಪಕ್ಷ ಸಭೆ ನಡೆಸಿದೆ. ಸರ್ವ ಪಕ್ಷ ನಿಯೋಗ ಒಯ್ದಿದ್ದೀರಿ, ಇವತ್ತು ಪರಗೋಡು ಯೋಜನೆ, ಕೇವಲ ಒಂದು ಟಿಎಂಸಿಗಿಂತ ಕಡಿಮೆ ನೀರು, ಆ ಕುಡಿಯುವ ನೀರಿನ ಯೋಜನೆಗೆ ಆಂಧ್ರಪ್ರದೇಶ ತಕರಾರು ಮಾಡಿದಾಗ ಸರ್ವಪಕ್ಷ ನಾಯಕರ ಸಭೆ ಆಯಿತು. ಸರ್ವಪಕ್ಷ ನಿಯೋಗ ಪ್ರಧಾನಮಂತ್ರಿಗಳು ಹಾಗೂ ರಾಷ್ಟ್ರಪತಿಗಳ ಬಳಿ ಹೋಗಿ ಬಂತು. ಆದರೆ ಈ ಕಳಸಾ ಬಂಡೂರಿ ನಾಲಾ ಯೋಜನೆ ಕುರಿತು ಸರ್ವಪಕ್ಷ ನಾಯಕರ ಒಂದೂ ಸಭೆ ಇವತ್ತು ಆಗಲಿಲ್ಲ. ಸರ್ವಪಕ್ಷ ನಾಯಕರ ನಿಯೋಗವೊಂದು ಪ್ರಧಾನಮಂತ್ರಿಗಳಿಗೆ ಹಾಗೂ ಜಲಸಂಪನ್ಮೂಲ ಸಚಿವರ ಬಳಿ ಹೋಗಿ ಬರಲಿಲ್ಲ. ಇದರ ಮಹತ್ವವನ್ನು ರಾಜ್ಯ ಸರ್ಕಾರಕ್ಕೆ ಹೇಳುವುದಕ್ಕೆ ಆಗಲಿಲ್ಲ. ಆದರೆ ಈಗಾಗಲೇ ಪ್ರಧಾನಮಂತ್ರಿಗಳನ್ನು ನಾವು ಭೆಟ್ಟಿಯಾಗಿದ್ದೇವೆ ಎಂದು ಹೇಳಿದರು; ಪ್ರಧಾನ ಮಂತ್ರಿಗಳು ಬೆಂಗಳೂರಿಗೆ ಬಂದ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಜಲ ಸಂಪನ್ಮೂಲ ಸಚಿವರು ಇದರ ಬಗ್ಗೆ ಹೇಳಿದರೇ ಹೊರತು ದೆಹಲಿಗೆ ಇದೇ ಒಂದು ಉದ್ದೇಶದ ಸಲುವಾಗಿ ನಿಯೋಗ ಕೊಂಡೊಯ್ಯುವುದು ಆಗಲಿಲ್ಲ. ಇದರ ಮಹತ್ವವನ್ನು ತಿಳಿಸುವಂಥದ್ದು ಆಗಲಿಲ್ಲ. ಇತ್ತೀಚೆಗೆ ಮಾನ್ಯ ಖರ್ಗೆಯವರು ಅವತ್ತಿನ ಸಭೆಯಲ್ಲಿದ್ದರು. ಲೋಕಸಭಾ ಸದಸ್ಯರ ಡೆಲಿಗೇಷನ್, ಕೇಂದ್ರದ ಜಲಸಂಪನ್ಮೂಲ ಸಚಿವರಾದಂಥ ಪ್ರಿಯರಂಜನ್ ದಾಸ್ ಮುನ್ಷಿಯವರನ್ನು ಭೇಟಿ ಮಾಡಿ ಒಂದು ತಾಸಿಗೂ ಹೆಚ್ಚು ಚರ್ಚೆ ಆಯಿತು. ದಾಸ್ ಮುನ್ಷಿಯವರು ಹೇಳಿದರು. ಇಲ್ಲಾ ನಿಮ್ಮ ಬೇಡಿಕೆ genuine ಇದೆ. ನಾನು ಹತ್ತು ದಿವಸದಲ್ಲಿ ಈ ತಡೆಯಾಜ್ಞೆಯನ್ನು ವೆಕೇಟ್ ಮಾಡಿಸುತ್ತೇನೆಂದು

ದಾಸ್ ಮುನ್ಷಿಯವರು ಹೇಳಿದರು. ಅವತ್ತು ಮಾನ್ಯ ಖರ್ಗೆಯವರು ಆ ಸಭೆಯಲ್ಲಿದ್ದರು. ಲೋಕಸಭಾ ಸದಸ್ಯರು ಡೆಲಿಗೇಷನ್‌ನಲ್ಲಿದ್ದರು. ಇವತ್ತು ಆ ಡೆಲಿಗೇಷನ್ ಹೋಗಿ more than six months ಆಯಿತು. ಕೇಂದ್ರ ಸರ್ಕಾರದಿಂದ ಇನ್ನೂವರೆಗೂ ಯಾವುದೇ ಒಂದು ರಿಸಲ್ಟ್ ಬರಲಿಲ್ಲ. ತಡೆಯಾಜ್ಞೆಯು ವೆಕೇಟ್ ಆಗಲಿಲ್ಲ. ಹೀಗಾಗಿ ಇವತ್ತು ಕಳೆದ ಎರಡು ತಿಂಗಳಿಂದ ನರಗುಂದದಲ್ಲಿ 60 ದಿವಸಗಳಿಂದ ಧರಣಿ ಸತ್ಯಾಗ್ರಹ ನಡೆಯುತ್ತಿದೆ. ನವಲಗುಂದದಲ್ಲೂ ಕಳೆದ ಒಂದು ತಿಂಗಳಿಂದಲೂ ಸತ್ಯಾಗ್ರಹ ನಡೆಯುತ್ತಿದೆ. ಹುಬ್ಬಳ್ಳಿ-ಧಾರವಾಡದಲ್ಲಿ ಪಾದಯಾತ್ರೆ ಮುಖಾಂತರ ಹೋರಾಟ ನಡೆಯಿತು. ಬೇರೆ ಬೇರೆ ತಾಲ್ಲೂಕುಗಳಲ್ಲಿ ಈಗಾಗಲೇ ಮೆರವಣಿಗೆ ಮುಖಾಂತರ ಇನ್ನಿತರ ಮುಖಾಂತರ ಈ ಕಳಸಾ ಬಂಡೂರಿ ನಾಲಾ ಯೋಜನೆ ಅನುಷ್ಠಾನವಾಗಬೇಕೆಂದು ಹೇಳಿ ಹೋರಾಟಗಳು ನಡೆಯುತ್ತಿವೆ. ಹೀಗಾಗಿ ಇದೊಂದು ಬಹಳ ಮಹತ್ವದ ಯೋಜನೆ. ಆ ಭಾಗದ ರೈತರಿಗೆ ಅನುಕೂಲವಾಗುವಂಥದ್ದು. ದಯವಿಟ್ಟು ರಾಜ್ಯ ಸರ್ಕಾರ ಇದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಮತ್ತು ಕಳೆದ ಎರಡು ತಿಂಗಳಿಂದಲೂ ಅಲ್ಲಿ ಹೋರಾಟ ನಡೆಯುತ್ತಿದ್ದರೂ ಇವತ್ತು ಮಾನ್ಯ ನೀರಾವರಿ ಸಚಿವರು ಆ ಹೋರಾಟದ ಶಿಬಿರಕ್ಕೆ ಬರಬೇಕಾಗಿತ್ತು. ಬಂದು ಅಲ್ಲಿಯ ರೈತರ ಭಾವನೆಗಳನ್ನು ತಿಳಿದುಕೊಂಡು ಸ್ಪಂದನ ಮಾಡುವಂಥ ಕೆಲಸವನ್ನು ಮಾಡಬೇಕಾಗಿತ್ತು. ಆದರೆ ಇನ್ನೂವರೆಗೆ ಆಗಲಿಲ್ಲ. ಆಲ್ ಪಾರ್ಟಿ ಲೀಡರ್‌ಗಳ ಒಂದು ಮೀಟಿಂಗನ್ನು ಕರೆಯಬೇಕಾಗಿತ್ತು. ಅದೂ ಆಗಲಿಲ್ಲ. ಆಲ್ ಪಾರ್ಟಿ ಡೆಲಿಗೇಷನ್ ಅನ್ನು ತೆಗೆದುಕೊಂಡು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಡುವಂಥದ್ದು ಆಗಬೇಕಾಗಿತ್ತು, ಅದೂ ಆಗಲಿಲ್ಲ. ಹೀಗಾಗಿ ರಾಜ್ಯ ಸರ್ಕಾರ ಏನು ಈಗಾಗಲೇ ಪತ್ರಗಳನ್ನು ಬರೆಯಲಾಗಿದೆ, ಸಭೆಯನ್ನು ಕರೆಯಲಾಗಿದೆ ಎನ್ನುವಂಥದ್ದು ಇದೆ. ಹಿಂದೆ ಹಲವಾರು ಬಾರಿ ವಿಧಾನಸಭೆಯಲ್ಲಿ ಚರ್ಚೆಯಾದ ಸಂದರ್ಭದಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಕಳೆದ ಬಾರಿ ಈ ಒಂದು ವಿಷಯಕ್ಕೆ ಸಂಬಂಧಪಟ್ಟಂತೆ ಇದೇ ವರ್ಷ ಫೆಬ್ರವರಿ 15ನೇ ತಾರೀಖಿಗೆ ಜಲಸಂಪನ್ಮೂಲ ಸಚಿವರು ಅಲ್ಲಿನ ಅಧಿಕಾರಿಗಳ ಜೊತೆ ಸಭೆಯಾಗಿದ್ದು ಬಿಟ್ಟರೆ, ಅಲ್ಲಿಂದ ಫೆಬ್ರವರಿಯಿಂದ ಇಲ್ಲಿಯವರೆಗೆ ಈ ವಿಷಯದ ಬಗ್ಗೆ ಒಂದು ಇಂಚೂ ಪ್ರೊಗ್ರೆಸ್ ಆಗಲಿಲ್ಲ. ಹೀಗಾಗಿ ಇದರ ಬಗ್ಗೆ

ರಾಜ್ಯ ಸರ್ಕಾರದ ನಿಲುವೇನು ಎನ್ನುವುದನ್ನು ಸ್ಪಷ್ಟ ಮಾಡಬೇಕಾಗುತ್ತದೆ ಮತ್ತು ಈ ಒಂದು ಯೋಜನೆಯನ್ನು ಯಾವಾಗ ಅನುಷ್ಠಾನ ಮಾಡುತ್ತದೆಂದು ಹೇಳಬೇಕಾಗುತ್ತದೆ. ಇದು ಕೇವಲ ಒಂದು ನೂರು ಕೋಟಿ ರೂಪಾಯಿ ಯೋಜನೆ. ಇದರಲ್ಲಿ ಎಂಟು ಟಿ.ಎಂ.ಸಿ. ನೀರು ಮಲಪ್ರಭಾಕ್ಕೆ ಬರುವಂಥ ಯೋಜನೆ. ಕುಡಿಯುವ ನೀರಿನ ಸಮಸ್ಯೆ ಬಗೆಹರಿಯುವಂಥದ್ದು ಅಲ್ಲಿನ ನೀರಾವರಿ ಯೋಜನೆಗೆ ಅನುಕೂಲವಾಗುವಂಥದ್ದು, ದಯವಿಟ್ಟು ಇದನ್ನು ರಾಜ್ಯ ಸರ್ಕಾರ ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಖರ್ಗೆಯವರು ಬಹಳ ಅನುಭವ ಇರುವಂಥವರು. ಇದರ ಬಗ್ಗೆ ಅವರಿಗೆ ಎಲ್ಲಾ ಮಾಹಿತಿಯೂ ಇದೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕರ್ನಾಟಕದಿಂದ ಬಂದಂಥವರು. ಅವರಿಗೆ ಇದೆಲ್ಲಾ ವಿಷಯವೂ ಗೊತ್ತಿದೆ. ಸಾಕಷ್ಟು ಸಲ ಹೇಳಿದ್ದಾರೆ. ಆದರೆ ಇದನ್ನು ರಾಜ್ಯ ಸರ್ಕಾರ ಎಷ್ಟು ಗಂಭೀರವಾಗಿ ತೆಗೆದುಕೊಳ್ಳಬೇಕಾಗಿತ್ತೋ ಅಷ್ಟು ತೆಗೆದುಕೊಳ್ಳಲಿಲ್ಲ. ಹೀಗಾಗಿ ಇವತ್ತು ಅಲ್ಲಿನ ರೈತರು ಬೀದಿಗೆ ಬಿದ್ದು ಹೋರಾಟ ಮಾಡುವಂಥ ಪರಿಸ್ಥಿತಿ ಇದೆ. ಸರ್ಕಾರ ಇದರ ಬಗ್ಗೆ ತನ್ನ ಸ್ಪಷ್ಟವಾದ ನಿಲುವನ್ನು ಹೇಳಬೇಕೆಂದು ನಾನು ಒತ್ತಾಯವನ್ನು ಮಾಡುತ್ತಿದ್ದೇನೆ.

ಶ್ರೀ ಸಿ.ಸಿ. **ಪಾಟೀಲ್ (ನರಗುಂದ)** : ಮಾನ್ಯ ಅಧ್ಯಕ್ಷರೇ, ಉತ್ತರ ಕರ್ನಾಟಕದ ಗದಗ್, ಧಾರವಾಡ, ಬೆಳಗಾಂ, ಬಾಗಲಕೋಟೆ ಜಿಲ್ಲೆಗಳು ಸತತವಾಗಿ ಬರಗಾಲಕ್ಕೆ ತುತ್ತಾಗಿ ಕುಡಿಯುವ ನೀರಿನ ಸಮಸ್ಯೆಯನ್ನು ತೀವ್ರವಾಗಿ ಎದುರಿಸುತ್ತಿರುವುದನ್ನು ನಾವೆಲ್ಲರೂ ನೋಡುತ್ತಿದ್ದೇವೆ. ಹುಬ್ಬಳ್ಳಿ-ಧಾರವಾಡಗಳಲ್ಲಿ ಹತ್ತು-ಹದಿನೈದು ದಿವಸಕ್ಕೊಮ್ಮೆ ನೀರನ್ನು ಕೊಡುತ್ತೇವೆ. ಉಳಿದ ಏಳೆಂಟು ತಾಲ್ಲೂಕುಗಳಲ್ಲಿ ನರಗುಂದ, ನವಲಗುಂದ, ರೋಣ, ಬಾದಾಮಿ ಹಾಗೂ ಬೈಲಹೊಂಗಲ ಈ ತಾಲ್ಲೂಕುಗಳಲ್ಲಿ ಏಳರಿಂದ ಎಂಟು ದಿವಸಕ್ಕೊಮ್ಮೆ ಕುಡಿಯುವ ನೀರನ್ನು ಕೊಡುವಂಥ ವ್ಯವಸ್ಥೆಯಲ್ಲಿದ್ದೇವೆಂದು ಹೇಳಿದರೆ ನಿಜವಾಗಲೂ ಶೋಚನೀಯ ಪರಿಸ್ಥಿತಿ ಎಂದೆನಿಸುತ್ತಿದೆ.

ಅಧ್ಯಕ್ಷರು : ದಯವಿಟ್ಟು ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸೀಟಿನಲ್ಲಿ ಕುಳಿತುಕೊಳ್ಳಿ.

ಶ್ರೀ ಸಿ.ಸಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈ ಎಲ್ಲಾ ಜಿಲ್ಲೆಗಳಲ್ಲೂ ಕಪ್ಪು ಮತ್ತು ಬ್ರಾಕಿಶ್ ಮಣ್ಣು ಇರುವುದರಿಂದ ಸರಿಯಾಗಿ ಮಳೆಯಾಗದೆ ಇರುವುದರಿಂದ ವಾಟರ್ ಟೇಬಲ್ ಕೆಳಗಡೆ ಹೋಗಿ ಬೋರ್‌ವೆಲ್‌ಗಳು ವಿಫಲವಾಗುತ್ತಿವೆ. ಇಂಥ ಸಂದರ್ಭದಲ್ಲಿ ಕುಡಿಯುವ ನೀರಿಗೆ ಸರ್ಕಾರ ಏನು ಯೋಜನೆಯನ್ನು ಮಾಡಿದೆ ಎನ್ನುವುದನ್ನು ನಾವು ವಿಚಾರ ಮಾಡಬೇಕಾದ ಕಾಲ ಬಹಳ ಮಹತ್ವವಾಗಿದೆ ಎನ್ನುವುದನ್ನು ನಾನು ತಮ್ಮ ಮೂಲಕ ಮಾನ್ಯ ಜಲಸಂಪನ್ಮೂಲ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಕುಡಿಯುವ ನೀರಿಗಾಗಿ ಈಗಾಗಲೇ ಸರ್ಕಾರ ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ. ಆದರೆ ಯಾವುದೇ ಪ್ರಯೋಜನವನ್ನು ನಾವು ಇದುವರೆಗೆ ಕಂಡಿಲ್ಲ. ಹುಬ್ಬಳ್ಳಿ-ಧಾರವಾಡ, ಹಾಗೂ ಬಾಗಲಕೋಟೆ ಬೆಳಗಾಂ ಇಲ್ಲಿ ಕುಡಿಯುವ ನೀರಿನ ಯೋಜನೆಗಳಿಗೆ ಮಲಪ್ರಭಾ ನೀರಿನ ಮೇಲೆ ಅವಲಂಬಿತವಾಗಿದೆ. ಮಲಪ್ರಭಾ ನೀರು ವಿಫಲವಾದರೆ ಈ ಎಲ್ಲಾ ಯೋಜನೆಗಳು ವಿಫಲವಾಗುತ್ತವೆ ಎನ್ನುವುದನ್ನು ನಾನು ತಮ್ಮ ಮುಖಾಂತರ ಮಾನ್ಯ ಜಲಸಂಪನ್ಮೂಲ ಸಚಿವರಿಗೆ ಮನವರಿಕೆ ಮಾಡಿಕೊಡುವುದಕ್ಕೆ ಪ್ರಯತ್ನವನ್ನು ಮಾಡುತ್ತಿದ್ದೇನೆ. ನಮ್ಮ ರಾಷ್ಟ್ರೀಯ ಜಲನೀತಿ ಕುಡಿಯುವ ನೀರಿನ ಸಲುವಾಗಿ first priority ಯನ್ನು ಕೊಡಬೇಕೆಂದು ಹೇಳುತ್ತಿದೆ. Even it is a Inter-State Water Dispute Act ಕೂಡ ಕುಡಿಯುವ ನೀರಿನ ಸಂಬಂಧ one river to another river basin, even it is a Inter State ಪ್ರಥಮ ಆದ್ಯತೆಯನ್ನು ಕೊಡಬೇಕೆಂದು ಹೇಳುವಂಥ ಸಂದರ್ಭ ಇರುವಾಗ ನಮ್ಮಲ್ಲೇ ಹುಟ್ಟಿ ನಮ್ಮಲ್ಲೇ ಹರಿಯುವ ಕಳಸ ಮತ್ತು ಬಂಡೂರು ಹಳ್ಳಗಳನ್ನು ನಮ್ಮ ಮಲಪ್ರಭಾ ನದಿಗೆ ಜೋಡಿಸುವುದಕ್ಕೆ ಏನು ತೊಂದರೆ ಇದೆ ಎಂಬ ಸಂಶಯ ನಮ್ಮನ್ನು ಕಾಡುತ್ತಿದೆ. ಹಲವಾರು ಹೈಕೋರ್ಟು ತೀರ್ಪುಗಳು ಕೂಡ 1995ರಲ್ಲಿ ದೆಹಲಿ ಹೈಕೋರ್ಟು ಕೂಡ ಇಂಟರ್ ಸ್ಟೇಟ್ ವಾಟರ್ ಬೇಸಿನ್‌ನಿಂದ ಕುಡಿಯುವ ನೀರಿಗೆ ಏನೂ ತೊಂದರೆ ಇಲ್ಲ ಎನ್ನುವಂಥ ತೀರ್ಪನ್ನು ಕೊಟ್ಟಿರುವಾಗ ಕಳಸಾ ಬಂಡೂರಿ ನಾಲೆಗಳನ್ನು ಮಲಪ್ರಭಾ ನದಿಗೆ ಜೋಡಿಸಲು ಗೌರ್ನಮೆಂಟ್ ಆಫ್ ಇಂಡಿಯಾ ನೀಡಿದ ತಡೆಯಾಜ್ಞೆ ಇದುವರೆಗೂ ಜಾರಿಯಲ್ಲಿದೆ. ಎಲ್ಲಿಯವರೆಗೆ

ಈ ತಡೆಯಾಜ್ಞೆ ಜಾರಿಯಲ್ಲಿರುತ್ತದೆ ಎನ್ನುವಂಥ ಪ್ರಶ್ನೆಯನ್ನು ನಾನು ತಮ್ಮ ಮುಖಾಂತರ ಸರ್ಕಾರವನ್ನು ಕೇಳುವುದಕ್ಕೆ ಇಚ್ಛಿಸುತ್ತೇನೆ. Is the Administrative Stay will be a permanent Stay? ಅಡ್ಮಿನಿಸ್ಟ್ರೇಟಿವ್ ಸ್ಟೇ ಕೊಟ್ಟಿದ್ದನ್ನು ಅದು ಪರ್ಮನೆಂಟ್ ಸ್ಟೇ ಆಗಿ ಉಳಿಯಬಾರದು. Why the Government of Karnataka failed to convince the Government of India to withdraw the stay order ಎನ್ನುವಂಥ ಮಾತನ್ನು ನಾನು ತಮ್ಮ ಮುಖಾಂತರ ಸನ್ಮಾನ್ಯ ಜಲಸಂಪನ್ಮೂಲ ಸಚಿವರನ್ನು ಕೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಮಲಪ್ರಭಾ ನದಿಗೆ ಈಗಾಗಲೇ ನಮ್ಮ ಘನ ಸರ್ಕಾರ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ. ಆದರೆ ಇದುವರೆಗೂ ನಾವು ಕೇವಲ 40 ಪರ್‌ಸೆಂಟ್ utilisation ಅನ್ನು ಮಾತ್ರ ಮಾಡಿಕೊಂಡಿದ್ದೇವೆ. ಮಲಪ್ರಭಾ ನದಿಯ ಒಳಹರಿವು ಕಡಿಮೆಯಾಗುತ್ತಿದೆ. ಡ್ಯಾಮ್‌ನಲ್ಲಿ ಮರಳು ತುಂಬಿ ಸಿಲ್ಟೇಜ್ ಸಿಲ್ಟ್‌ಅಪ್ ಆಗಿದೆ. ಈ ಎಲ್ಲಾ ಕಾರಣಗಳಿಂದ ಆ ಭಾಗದ ಜನರಿಗೆ ಕಳಸ ಬಂಡೂರಿ ಯೋಜನೆ ಜಾರಿಯಾದರೆ ಮಾತ್ರ ಪರಿಹಾರ ಸಾಧ್ಯ. ಈ ಯೋಜನೆ ಜಾರಿಯಾದರೆ ಆ ಭಾಗದ ಜನ ನೆಮ್ಮದಿಯ ನಿಟ್ಟುಸಿರನ್ನು ಬಿಡುವುದಕ್ಕೆ ಸಾಧ್ಯವಾಗುತ್ತದೆ. ನಮ್ಮ ಪಕ್ಕದ ರಾಜ್ಯಗಳಾದ ಆಂಧ್ರ ಮತ್ತು ಮಹಾರಾಷ್ಟ್ರ ಯಾವುದೇ ಅನುಮತಿ ಇಲ್ಲದೆ ಭೀಮಾ ಟು ಸೀನಾ ನದಿಗೆ ಹೋಗಿದ್ದಾರೆ. ಶ್ರೀಶೈಲಂ ಯೋಜನೆ ಇದೆ. ಇಂಥ ಹತ್ತು ಹಲವಾರು ಯೋಜನೆಗಳನ್ನು ಕೈಗೆತ್ತಿಕೊಂಡಿರುವಾಗ ಈ ಯೋಜನೆ ಜಾರಿಗಾಗಿ ನಾವು ಈ ರಾಜ್ಯದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಧರ್ಮಸಿಂಗ್ ಅವರನ್ನು ಭೇಟಿ ಮಾಡಿದ್ದೇವೆ. ಘನತೆವೆತ್ತ ರಾಜ್ಯಪಾಲರಾದ ಚತುರ್ವೇದಿ ಅವರನ್ನು ಕೇಂದ್ರ ಜಲಸಂಪನ್ಮೂಲ ಸಚಿವರಾದ ಪ್ರಿಯರಂಜನ್ ದಾಸ್ ಮುನ್ಷಿ ಅವರನ್ನು ಭೇಟಿ ಮಾಡಿ ಸಾಕಷ್ಟು ಮನವಿಯನ್ನು ಕೊಟ್ಟಿದ್ದೇವೆ. ಆದರೂ ಇದುವರೆಗೂ ಯಾವುದೇ ಪ್ರಯೋಜನವಾಗಿಲ್ಲ. ಈ ಯೋಜನೆಯ ಕಾರ್ಯಗತಕ್ಕಾಗಿ ಸುಮಾರು 60 ದಿವಸಗಳಿಂದ ನಿರಂತರವಾಗಿ ನರಗುಂದ ನಗರದಲ್ಲಿ ಸರದಿ ಅನ್ನ ಸತ್ಯಾಗ್ರಹ ನಡೆಯುತ್ತಿದೆ. ರೈತರು ಕೂಲಿ ಕಾರ್ಮಿಕರು, ಹಮಾಲ್ ಅಸೋಸಿಯೇಷನ್‌ನವರು, ರಿಕ್ಷಾದವರು,

ಟ್ರಾಕ್ಟರ್‌ರವರು, ಲಾರಿಯವರು ಎಲ್ಲರೂ ಕೂಡಿಕೊಂಡು ಇವತ್ತು ಅಲ್ಲಿ ಹಗಲು ರಾತ್ರಿ ಹೋರಾಟವನ್ನು ಮಾಡುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ರಾಜ್ಯ ಸರ್ಕಾರ ಅಂದರೆ ಸನ್ಮಾನ್ಯ ಶ್ರೀ ಹೆಚ್.ಕೆ. ಪಾಟೀಲರು ಒಂದು ದಿವಸ ಬಂದು ಹೋದರು. ಅವರಿಂದ ಕೂಡ ನಮಗೆ ಸರಿಯಾದ ಯಾವುದೇ ಒಂದು ರೀತಿಯ ನಿರ್ದಿಷ್ಟ ಉತ್ತರ ಬರಲಿಲ್ಲ. ಹೀಗಾಗಿ ಅಲ್ಲಿನ ಭಾಗದಲ್ಲಿ ಹೋರಾಟ ಮುಂದುವರೆದಿದೆ. ರೈತರು ಶಾಂತಿಯುತ ಹೋರಾಟವನ್ನು ಸನ್ಮಾನ್ಯ ಧರ್ಮಸಿಂಗ್ ನೇತೃತ್ವದ ಈ ಸಮ್ಮಿಶ್ರ ಸರ್ಕಾರ ನರಗುಂದದಲ್ಲಿ ನಡೆಯುತ್ತಿರುವ ಹೋರಾಟವನ್ನು ಕಡೆಗಣಿಸಬಾರದು ಎಂದು ನಾನು ಸರ್ಕಾರಕ್ಕೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. 1980ರ ಘಟನೆಯನ್ನು ಸರ್ಕಾರ ಪುನಃ ಮೆಲುಕು ಹಾಕಿಕೊಳ್ಳಬೇಕೆನ್ನುವ ಮಾತನ್ನೂ ಕೂಡ ನಾನು ಹೇಳುತ್ತಿದ್ದೇನೆ. ಈ ಹಂತದಲ್ಲಿ ಸತ್ಯಾಗ್ರಹದ ಪರವಾಗಿ ಸರ್ಕಾರ ಬಂದು ಏನಾದರೂ ಒಂದು ಭರವಸೆಯನ್ನು ಸನ್ಮಾನ್ಯ ಜಗದೀಶ್ ಶೆಟ್ಟರು ಹೇಳಿದ ಹಾಗೆ ಕೊಡಬೇಕಾಗಿತ್ತು. ಆದರೆ ಅವರು ಯಾವುದೂ ಕೊಡಲಿಲ್ಲ. ಅದಕ್ಕೆ ಕಾರಣ ಇದುವರೆಗೂ ಈಗಲಾದರೂ ಗೌರ್ನಮೆಂಟ್ ಆಫ್ ಇಂಡಿಯಾ ಏನು ಇದರ ಬಗ್ಗೆ ಸ್ಟೇ ಆರ್ಡರ್ ಕೊಟ್ಟಿದೆ. ಈ ಸ್ಟೇ ಆರ್ಡರನ್ನು ರಾಜ್ಯ ಸರ್ಕಾರ ವೆಕೇಟ್ ಮಾಡಿಸಬೇಕು. ವೆಕೇಟ್ ಮಾಡುವುದಕ್ಕೆ ಪ್ರಯತ್ನವನ್ನು ಮಾಡಬೇಕು. ಅಲ್ಲದೆ ಎಲ್ಲಾ ನ್ಯಾಯ, ನೀತಿ, ಕಾನೂನು ನಮ್ಮ ಪರವಾಗಿ ಇರುವಾಗ ಈ ಕಾಮಗಾರಿಯನ್ನು ಸರ್ಕಾರ ಆ ಸ್ಟೇ ಆರ್ಡರನ್ನು ವೆಕೇಟ್ ಮಾಡದೇ ಹೋದರೂ ಕೂಡ ಪ್ರಾರಂಭ ಮಾಡಬೇಕು. ಅದನ್ನು ಎಂದು ಪ್ರಾರಂಭ ಮಾಡುತ್ತೀರಿ ಎನ್ನುವುದನ್ನು ಸನ್ಮಾನ್ಯ ಜಲಸಂಪನ್ಮೂಲ ಸಚಿವರು ಈ ಸದನಕ್ಕೆ ತಿಳಿಸಬೇಕು. ಇಲ್ಲದೆ ಹೋದಲ್ಲಿ ಏನು ಸರ್ಕಾರ ಸನ್ಮಾನ್ಯ ಧರ್ಮಸಿಂಗ್ ನೇತೃತ್ವದ ಸರ್ಕಾರ ಏನು ಜೆ.ಡಿ.(ಎಸ್) ನೇತೃತ್ವದ ಸರ್ಕಾರ ನಾವು ರೈತರ ಪರವಾಗಿದ್ದೇವೆ. ರೈತರ ಪರವಾಗಿ ಹಲವಾರು ಕಾರ್ಯಕ್ರಮಗಳನ್ನು ನಾವು ಹಮ್ಮಿಕೊಂಡಿದ್ದೇವೆ. ಇದು ರೈತರ ಪರವಾದ ಸರ್ಕಾರ ಎಂದು ಏನು ಹೇಳುತ್ತಾರಲ್ಲಾ ಈ ಯೋಜನೆ ಜಾರಿಗೆ ನಿರ್ದಿಷ್ಟವಾದ ದಿನಾಂಕವನ್ನು ಗೊತ್ತುಪಡಿಸದೆ ಹೋಗುವಂಥ ಇಚ್ಛಾಶಕ್ತಿಯನ್ನು ಪ್ರದರ್ಶಿಸದೇ ಹೋದರೆ ಇದು ಬಹುತೇಕ ರೈತರ ಪರವಾದ ಸರ್ಕಾರ ಅಲ್ಲ ಎಂದು ಹೇಳಬೇಕಾಗುತ್ತದೆ. ನಾಳೆ ಜುಲೈ 21ಕ್ಕೆ

ಪ್ರತಿ ವರ್ಷ ನರಗುಂದದಲ್ಲಿ ರೈತ ಹುತಾತ್ಮ ದಿನಾಚರಣೆಯನ್ನು ನಾವು ಆಚರಿಸುತ್ತಿದ್ದೇವೆ. ಎಲ್ಲಾ ಪಕ್ಷದ ನಾಯಕರೂ ಅಲ್ಲಿಗೆ ಬರುತ್ತಾರೆ. ಈ ವರ್ಷ ನಾವು ಮಲಪ್ರಭಾ ಅಚ್ಚುಕಟ್ಟು ಪ್ರದೇಶದ ರೈತರ ಒಕ್ಕೂಟ ಎಂದು ಹೇಳಿ ಪಕ್ಷಾತೀತವಾದ ಒಂದು ವೇದಿಕೆಯನ್ನು ನಾವು ಮಾಡಿಕೊಂಡಿದ್ದೇವೆ. ಆ ವೇದಿಕೆಯ ಮುಖಾಂತರ ಒಂದು ಲಕ್ಷ ಜನರು ನರಗುಂದದಲ್ಲಿ ರೈತರು ಸೇರುವವರಿದ್ದಾರೆ. ಅಷ್ಟರೊಳಗಾಗಿ ಸರ್ಕಾರ ಏನಾದರೂ ಒಂದು ವಿಷಯವನ್ನು ಇತ್ಯರ್ಥ ಮಾಡದಿದ್ದರೆ ಪರಿಸ್ಥಿತಿ ಕೈಮೀರಿ ಹೋಗುತ್ತದೆ. ಆಗ ಏನಾದರ ಅನಾಹುತಗಳು ಸಂಭವಿಸಿದರೆ ಅದಕ್ಕೆ ಸರ್ಕಾರವೇ ಹೊಣೆ ಎಂದು ಹೇಳಿ ಈ ಯೋಜನೆಯನ್ನು ಬೇಗನೆ ಜಾರಿಗೊಳಿಸಬೇಕೆಂದು ತಮ್ಮ ಮುಖಾಂತರ ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ಮಾನ್ಯ ನೀರಾವರಿ ಸಚಿವರು ಸಾಕಷ್ಟು ಅನುಭವ ಇರುವಂಥವರು. ಈ ಸಮಸ್ಯೆ ಗೊತ್ತಿರುವಂಥವರು. ನಾವು ಮನವಿಯನ್ನು ಪ್ರಧಾನಿಯವರಿಗೆ ಕೊಟ್ಟೆವು. ಅಥವಾ ನಾವು ಭರವಸೆಯನ್ನು ಕೊಟ್ಟೆವು ಎಂದರೆ ಇದು ಆಗುವುದಿಲ್ಲ. ಸನ್ಮಾನ್ಯ ಅಧ್ಯಕ್ಷರೆ, ಇದೊಂದು ತುದಿ ಮುಟ್ಟಬೇಕು.

ಅಧ್ಯಕ್ಷರು : ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ಸಚಿವರು ಈ ಕೆಲಸವನ್ನು ನಾವು ಮಾಡಿಕೊಡುತ್ತೇವೆ. ಗೋವಾ ಸರ್ಕಾರ ನಿಮ್ಮದೇ ಸರ್ಕಾರ, ನಿಮ್ಮದೇ ಪಕ್ಷದ ಸರ್ಕಾರ ಇದ್ದಾಗ ಕೇಂದ್ರ ಸರ್ಕಾರ ಇದ್ದಾಗ, ಇವತ್ತು ನಮ್ಮ ಹಕ್ಕನ್ನು ನಾವು ಕೇಳುತ್ತಿದ್ದೇವೆ. ಅವರೇನೂ ನಮಗೆ ಉಪಕಾರ ಮಾಡುವ ಅಗತ್ಯವಿಲ್ಲ. ನರಗುಂದ, ನವಲಗುಂದ ಸುತ್ತಮುತ್ತಲಿನ ಜನರು ಈಗಾಗಲೇ ಬೇಸತ್ತಿದ್ದಾರೆ. ಅದು ಬೇರೆ ರೀತಿ ಹೊಸ ತಿರುವನ್ನು ತೆಗೆದುಕೊಳ್ಳಬಾರದು. ಅದಕ್ಕಾಗಿ ಒಂದು ಸ್ಪಷ್ಟವಾದಂಥ ಭರವಸೆ ಹೇಗಾದರೂ ಮಾಡಿ ಕೇಂದ್ರ ಸರ್ಕಾರದ ಜೊತೆ ಮಾತನಾಡಿ ಗೋವಾ ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿ ಅವರನ್ನು convince ಮಾಡಿ ಈ ಯೋಜನೆ ಜಾರಿಗೆ ಬರುವುದಕ್ಕೆ ಏನು ಸ್ಪಷ್ಟವಾದ ಕಾರ್ಯಕ್ರಮವನ್ನು ರೂಪಿಸುತ್ತೀರೋ ದಯಮಾಡಿ ಅದನ್ನು ಹೇಳಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಹಾಗೂ ಸಾರಿಗೆ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ಇವೊತ್ತು ಮುಂಜಾನೆಯೇ ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ ಮತ್ತು ಈ ವಿಷಯವನ್ನು ಪ್ರಸ್ತಾಪಿಸುವ ಮೂಲಕ ನನಗೆ ಈಗ ತಾನೆ ವಿಷಯದ ಬಗ್ಗೆ ಮಾಹಿತಿ ಒದಗಿಸಿಕೊಟ್ಟಿದ್ದಾರೆ. ಶ್ರೀಮಾನ್ ಯಡಿಯೂರಪ್ಪನವರಿಗೆ ಇದರ ಬಗ್ಗೆ ಮೊದಲಿನಿಂದಲೂ ಹೆಚ್ಚಿನ ಮಾಹಿತಿ ಇದೆ. ಅದರಲ್ಲೂ ವಿಶೇಷವಾಗಿ ಜಗದೀಶ್ ಶೆಟ್ಟರ್‌ರವರೂ ಕೂಡ ಅನೇಕ ದಿವಸಗಳಿಂದಲೂ ಈ ವಿಷಯವನ್ನು ಪ್ರಸ್ತಾಪಿಸುತ್ತಿದ್ದಾರೆ. ಬಹುಶಃ ಈ ಸದನದಲ್ಲಿರುವ ಬೆಳಗಾಂ ಜಿಲ್ಲೆಯ ಶಾಸಕರು ಮತ್ತು ಧಾರವಾಡ ಜಿಲ್ಲೆಯ ಶಾಸಕರೂ ಕೂಡ ಇದಕ್ಕೆ ಹೆಚ್ಚಿನ ಒತ್ತು ಕೊಟ್ಟು ಕಳಸಾ-ಬಂಡೂರಿ ನಾಲಾ ಯೋಜನೆಯನ್ನು ಕಾರ್ಯಗತಗೊಳಿಸಬೇಕು ಮತ್ತು ಆದಷ್ಟು ಬೇಗನೇ 7.5 ಟಿ.ಎಂ.ಸಿ. ಯಷ್ಟು ನೀರನ್ನು ಹುಬ್ಬಳ್ಳಿ-ಧಾರವಾಡ ಮಹಾನಗರಕ್ಕೆ ಕುಡಿಯುವ ನೀರಿಗಾಗಿ ಒದಗಿಸಿಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಅದೇ ರೀತಿ ಉಳಿದಂತೆ ಎಲ್ಲಾ ಭಾಗಗಳಿಗೂ ಕೂಡ ಅನುಕೂಲವಾಗುವುದರಿಂದ ಈ ಯೋಜನೆಯನ್ನು ತೆಗೆದುಕೊಳ್ಳಬೇಕೆಂಬ ಅನಿಸಿಕೆ ಅವರದ್ದೂ ಇದೆ. ಸರ್ಕಾರದ್ದೂ ಕೂಡ ಇದೆ. ಅದಕ್ಕೋಸ್ಕರ ಈ ನಿಟ್ಟಿನಲ್ಲಿ ಸರ್ಕಾರ ಸರ್ವ ಪ್ರಯತ್ನ ಮಾಡಿಕೊಂಡು ಇಲ್ಲಿಯವರೆಗೂ ಬಂದಿದೆ. ಈ ಪ್ರಶ್ನೆ ಇವೊತ್ತಿನದಲ್ಲ. ಇದಕ್ಕೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದ್ದನ್ನು 19.09.02 ರಂದು ತಡೆ ಹಿಡಿದಿದೆ. ಕೊಟ್ಟ ಒಪ್ಪಿಗೆಯನ್ನು 19.09.02 ರಂದು ತಡೆ ಹಿಡಿದಿರುತ್ತದೆ. ಈ ರೀತಿ ತಡೆಹಿಡಿದಿರುವುದನ್ನು ವೆಕೇಟ್ ಮಾಡಿಸುವ ದಿಸೆಯಲ್ಲಿ ಸಾಕಷ್ಟು ಪ್ರಯತ್ನ ಹಿಂದಿನ ಸರ್ಕಾರದಲ್ಲೂ ನಡೆದಿದೆ. ಮತ್ತು ನಾವು ಅಧಿಕಾರಕ್ಕೆ ಬಂದ ನಂತರ ಇದಕ್ಕೆ ಒಂದು ಸಲ ಅಲ್ಲ, ಅನೇಕ ಬಾರಿ ಪ್ರಯತ್ನಿಸಿದ್ದೇವೆ.

(ಮಾನ್ಯ ಉಪಾಧ್ಯಕ್ಷರು ಪೀಠವನ್ನಲಂಕರಿಸಿದರು)

ಈ ಕುರಿತಂತೆ ಏನೂ ಪ್ರಯತ್ನ ಜರುಗಿಲ್ಲವೆಂದು ಮಾನ್ಯ ಸದಸ್ಯರಾದ ಜಗದೀಶ್ ಶೆಟ್ಟರ್‌ರವರು ಮಾತನಾಡುತ್ತಾ ಹೇಳಿದರು. ಮಾನ್ಯ ಪ್ರಧಾನಮಂತ್ರಿಗಳು ಇಲ್ಲಿಗೆ ಬಂದಿದ್ದಾಗಲೂ ಕೂಡ ವಿಶೇಷವಾಗಿ ಅವರನ್ನು ಭೇಟಿಯಾಗಿ ಈ ವಿಷಯ ತಿಳಿಸಿದ್ದೇವೆ. ಇಷ್ಟೇ ಅಲ್ಲದೆ, ಕೇಂದ್ರ ಸರ್ಕಾರದ ಜಲಸಂಪನ್ಮೂಲ ಸಚಿವರಾದ ಶ್ರೀ ಪ್ರಿಯರಂಜನ್ ದಾಸ್ ಮುನ್ಷಿಯವರನ್ನು

ವಿಶೇಷವಾಗಿ ಭೇಟಿಯಾಗಿ ನೀಡಿರುವ ತಡೆಯಾಜ್ಞೆಯನ್ನು ವೆಕೇಟ್ ಮಾಡಿಸಬೇಕೆಂದು ತಿಳಿಸಿದ್ದೇವೆ. ಇದಾದ ನಂತರ ಫೆಬ್ರವರಿ ತಿಂಗಳಿನಲ್ಲಿ ಮಾನ್ಯ ಪ್ರಧಾನಮಂತ್ರಿಯವರನ್ನು ಭೇಟಿಯಾಗಿ ವಿಷಯವನ್ನು ಮನವರಿಕೆ ಮಾಡಿಕೊಡುವ ಕೆಲಸ ಮಾಡಿದ್ದೇವೆ ಮತ್ತು ನಮ್ಮ ಮಾನ್ಯ ಮುಖ್ಯಮಂತ್ರಿಗಳು ನವದೆಹಲಿಯ ಕರ್ನಾಟಕ ಭವನದಲ್ಲಿ ರಾಜ್ಯದ ಪಾರ್ಲಿಮೆಂಟ್ ಸದಸ್ಯರ ಸಭೆ ಕರೆದಾಗಲೂ ಕೂಡ ಈ ವಿಷಯವನ್ನು ವಿಶೇಷವಾಗಿ ಪ್ರಸ್ತಾಪಿಸಿ ಚರ್ಚಿಸಿದ್ದಾರೆ. 'ಆದಷ್ಟು ಬೇಗನೆ ನೀಡಿರುವ ತಡೆಯಾಜ್ಞೆಯನ್ನು ತೆರವುಗೊಳಿಸುತ್ತೇನೆ' ಎನ್ನುವುದನ್ನು ಹೇಳಿದರು. ಆದರೆ, ದುರ್ದೈವ ತೆರವುಗೊಳ್ಳಲಿಲ್ಲ. ತೆರವುಗೊಳ್ಳಲಿಲ್ಲವೆಂದರೂ ಕೂಡ ಮುಂದೆ ನಾವು ಏನು ಮಾಡಬೇಕೆಂಬುದು ಬಹಳ ಮುಖ್ಯವಾದುದು. ಈ ಕುರಿತಂತೆ ಮಾನ್ಯ ಯಡಿಯೂರಪ್ಪ ಮತ್ತು ಜಗದೀಶ್ ಶೆಟ್ಟರ್‌ರವರು ಗೈಡ್ ಮಾಡಿದರೆ ನಾನು ಖಂಡಿತವಾಗಿಯೂ ಆ ದಿಕ್ಕಿನಲ್ಲಿ ಹೋಗುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇಲ್ಲದಿದ್ದರೆ ಏನಾಗುತ್ತದೆಂದರೆ ಕೇಂದ್ರ ಸರ್ಕಾರ ಒಂದು ಸಲ ಸ್ಟೇ ಕೊಟ್ಟ ನಂತರ ನಾವು ಅದನ್ನು ವೆಕೇಟ್ ಮಾಡಿಸುವುದಕ್ಕೆ ಸಾಕಷ್ಟು ಪ್ರಯತ್ನ ಮಾಡುತ್ತಿದ್ದೇವೆ. ಅಷ್ಟೇ ಅಲ್ಲದೆ, ತಮಗೆ ಗೊತ್ತಿರುವಂತೆ ಪಾರ್ಲಿಮೆಂಟ್ ಸದಸ್ಯರೂ ಕೂಡ ಅನೇಕ ಬಾರಿ ಒತ್ತಡ ತರುತ್ತಿದ್ದಾರೆ. ಒತ್ತಡ ತಂದರೂ ಕೂಡ ಇವೊತ್ತು ಇದನ್ನು ಯಾವ ಗತಿಯಲ್ಲಿ ವಿಕೇಟ್ ಮಾಡಿಕೊಡಬೇಕಾಗಿತ್ತೋ ಆ ರೀತಿ ವೆಕೇಟ್ ಮಾಡಿಕೊಟ್ಟಿಲ್ಲ ಅದಕ್ಕೋಸ್ಕರ, ಜನರು ಬೇಸತ್ತು ಸಹಜವಾಗಿ ಆ ಭಾಗದ ಜನರು ಇವೊತ್ತು ಅಲ್ಲಿ ಸತ್ಯಾಗ್ರಹ ಮಾಡುವುದು ಮತ್ತು ಈ ಯೋಜನೆಯನ್ನು ಕಾರ್ಯಗತಗೊಳಿಸಬೇಕೆಂಬ ದೃಷ್ಟಿಯಿಂದ ಅವರು ತಮ್ಮ ಸತ್ಯಾಗ್ರಹ ಮುಂದುವರೆಸಿದರು. ಆದುದರಿಂದ, ಅವರಿಗೆ ನನ್ನ ಮನವಿ ಏನೆಂದರೆ, ಸತ್ಯಾಗ್ರಹದಲ್ಲಿ ಕುಳಿತಿರುವ ರೈತರಿಗೆ ಮತ್ತು ತಮಗೂ ಕೂಡ ನನ್ನ ಮನವಿ ಏನೆಂದರೆ, ತಾವು ಸ್ವಲ್ಪ ಅವರ ಮನವೊಲಿಸಿ ನಾವು ಇದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಪ್ರಯತ್ನ ಮಾಡುವ ಮೂಲಕ ಯಾವುದೇ ರೀತಿಯಲ್ಲೂ ಈ ಯೋಜನೆಯನ್ನು ಕೈಬಿಡುವುದಿಲ್ಲ. ಸರ್ಕಾರ ಈ ಯೋಜನೆಯನ್ನು ಮಾಡಿಯೇ ತೀರುತ್ತದೆಂಬ ವಿಷಯವನ್ನು ಅವರಿಗೆ ತಾವು ಮನವರಿಕೆ ಮಾಡಿಕೊಟ್ಟರೆ ಖಂಡಿತವಾಗಿಯೂ ರೈತರು ಇವೊತ್ತು ತಮ್ಮ ಮಾತಿಗೆ ಮತ್ತು ಸರ್ಕಾರದ ಮಾತನ್ನು ನಂಬಿ

ಸತ್ಯಾಗ್ರಹವನ್ನು ಮುಕ್ತಾಯಗೊಳಿಸುತ್ತಾರೆಂಬ ನಂಬಿಕೆ ನನಗಿದೆ. ಇಲ್ಲವೇ ಇದನ್ನು ಮುಂದುವರೆಸುತ್ತೇವೆಂದು ನಾವು ಹೇಳಿಕೊಂಡು ಹೋದರೆ ಖಂಡಿತವಾಗಿಯೂ ಯಾವುದೇ ಒಂದು ಸಂಘಟನೆಯಾಗಲಿ, ರೈತರಾಗಲಿ ಇದಕ್ಕೆ ಯೀಲ್ಡ್ ಆಗುವುದಿಲ್ಲ. ನೋಡೋಣ ಈ ರೀತಿ ಮಾಡಿದರೆ ಸಿಗುತ್ತದೆ ಎನ್ನುವಂತಾದ್ದು ತಮಗೆಲ್ಲರಿಗೂ ಗೊತ್ತಿರುವಂತೆ ನೆನೆಗುದಿಗೆ ಬಿದ್ದಿದ್ದ ಅನೇಕ ಯೋಜನೆಗಳಿಗೆ ಚಾಲನೆ ಕೊಡುವ ಪ್ರಯತ್ನ ಮಾಡಿದ್ದೇವೆ. ಅದು ಹುನಗುಂದದ ಯೋಜನೆಯಾಗಿರಬಹುದು. ಬಿಜಾಪುರದ ಯೋಜನೆಯಾಗಿರ ಬಹುದು. ಅಥವಾ ಬೆಳಗಾಂನಲ್ಲಿರುವ ಯೋಜನೆಯಾಗಿರಬಹುದು. ಇತ್ತ ಕಡೆ ಅಪ್ಪರ್ ತುಂಗಾ ಯೋಜನೆಗೆ ಒಂದೂವರೆ ವರ್ಷದಿಂದ ಸ್ಟೇ ಇದ್ದುದನ್ನು ವೆಕೇಟ್ ಮಾಡಿಸುವ ಮೂಲಕ ಚಾಲನೆ ಕೊಟ್ಟದ್ದಿರಬಹುದು. ಈ ಯೋಜನೆಗೆ ನಾವು ಚಾಲನೆ ನೀಡುವ ಮೂಲಕ ನಿರ್ಣಯ ಕೈಗೊಂಡು ಈಗಾಗಲೇ ಸರ್ವೆ ಕಾರ್ಯ ಜರುಗಿದೆ. ಈ ಕೆಲಸವನ್ನೂ ಕೂಡ ತ್ವರಿತ ಗತಿಯಿಂದ ಮಾಡಬೇಕೆಂಬ ಪ್ರಯತ್ನ ಸಾಗಿದೆ. ಅದಲ್ಲದೆ, ಶಿವಮೊಗ್ಗದ ಚೆನ್ನಗಿರಿಯಲ್ಲಿ ಪೆಂಡಿಂಗ್ ಇದ್ದ ಅನೇಕ ಯೋಜನೆಯನ್ನು ಕ್ಲಿಯರ್ ಮಾಡಿಕೊಟ್ಟಿದ್ದೇವೆ. ಇದನ್ನು ನಾನು ಹೇಳುವಂತಹ ಉದ್ದೇಶವೇನೆಂದರೆ ಈ ಯೋಜನೆಯನ್ನು ನಾವು ಉದ್ದೇಶಪೂರ್ವಕವಾಗಿ ನಿಲ್ಲಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ತಮಗೆ ಎಷ್ಟು ಕಾಳಜಿ, ಕಳಕಳಿ ಇದೆಯೋ, ಅಷ್ಟೇ ಕಾಳಜಿ, ಕಳಕಳಿ ನಮಗೂ ಇದೆ. ಮುಖ್ಯಮಂತ್ರಿಗಳಿಗೂ ಇದೆ. ಮತ್ತು ಈ ಸಮಸ್ಯೆಯನ್ನು ನಾವೆಲ್ಲರೂ ಕೂಡಿ ಬಗೆಹರಿಸುವುದು ಬಹಳ ಮುಖ್ಯ. ಆದುದರಿಂದ, ಕೇಂದ್ರ ಸರ್ಕಾರಕ್ಕೆ ಇನ್ನೊಂದು ಸಲ ಮಾನ್ಯ ಮುಖ್ಯಮಂತ್ರಿಯವರ ನೇತೃತ್ವದಲ್ಲಿ ಡಿಲಿಗೇಶನ್ ಹೋಗಬೇಕೆಂದರೆ, ಖಂಡಿತವಾಗಿಯೂ ಮಾನ್ಯ ಮುಖ್ಯಮಂತ್ರಿಯವರ ದಿನಾಂಕ ನೋಡಿಕೊಂಡು ನಾವೆಲ್ಲರೂ ಕೂಡ ಇನ್ನೊಮ್ಮೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕುವ ಮೂಲಕ ಇನ್ನೊಮ್ಮೆ ಇದರ ಬಗ್ಗೆ ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡೋಣ.

ಎರಡನೆಯದಾಗಿ, ಟ್ರಿಬ್ಯೂನಲ್ ಬಗ್ಗೆ ತಾವು ಹೇಳಿದಿರಿ. ಟ್ರಿಬ್ಯೂನಲ್ ಇದನ್ನು ಒಪ್ಪಿಕೊಳ್ಳಬೇಕಲ್ಲಾ ಎಂದು. ಗೋವಾದವರಿಗೂ ಈಗಾಗಲೇ ಇದರ ಬಗ್ಗೆ ಹೇಳಿದ್ದಾರೆ. ಆದರೆ, ನಾವು ಕನ್‌ಸೆಂಟ್ ಕೊಟ್ಟ ಬಳಿಕ ಅವರು ಅಲ್ಲಿಗೆ

ಹೋದರೆ ಇನ್ನೂ ಟೈಮ್ ಆಗಬಾರದೆಂಬ ದೃಷ್ಟಿಯಿಂದ ಚಿಂತನೆ ಮಾಡುತ್ತಿದ್ದೇವೆಯೇ ಹೊರತು ಈ ಅಡ್ಮಿನಿಸ್ಟ್ರೇಷನ್ ಒಂದು ಸಲ ಕೊಟ್ಟ ಸ್ಟೇ ಅನ್ನು ವೆಕೇಟ್ ಮಾಡಿದರೆ ತ್ವರಿತ ಗತಿಯಿಂದ ಕೆಲಸವನ್ನು ಪ್ರಾರಂಭ ಮಾಡಬಹುದೆಂಬ ಉದ್ದೇಶದಿಂದ ಇಂತಹ ಒಂದು ಚಿಂತನೆ ನಡೆದಿದೆ. ಏಕೆಂದರೆ, ಇದಾದ ನಂತರ ತಮಗೆ ಗೊತ್ತಿರುವಂತೆ ಫಾರೆಸ್ಟ್ ಡಿಪಾರ್ಟ್‌ಮೆಂಟ್ ಕ್ಲಿಯರೆನ್ಸ್, ಎನ್ವಿರಾನ್‌ಮೆಂಟ್ ಕ್ಲಿಯರೆನ್ಸ್ ಆಗಬೇಕಾಗುತ್ತದೆ. ಅದೇನೇ ಇರಲಿ, ಮುಂದಿನ ಕ್ಲಿಯರೆನ್ಸ್ ನಾವು ನೋಡಿಕೊಳ್ಳೋಣ. ಏತನ್ಮಧ್ಯೆ ಏನು ಸ್ಟೇ ಆರ್ಡರ್ ಕೊಟ್ಟಿದ್ದಾರೆ, ಅದು ವೆಕೇಟ್ ಆದರೆ ತಕ್ಷಣ ಕೆಲಸ ಪ್ರಾರಂಭ ಮಾಡುತ್ತೇವೆ. ಇದಕ್ಕೆ ಮೀನ-ಮೇಷ ಎಣಿಸುವ ಪ್ರಶ್ನೆಯಿಲ್ಲ. ಎಷ್ಟೇ ದುಡ್ಡು ಖರ್ಚಾದರೂ ಕೂಡ ಈ ಯೋಜನೆಯನ್ನು ಕಾರ್ಯಗತಗೊಳಿಸಬೇಕೆಂಬ ಉದ್ದೇಶ ನಮ್ಮದಾಗಿದೆ. ಯೋಜನೆಯನ್ನು ಅನುಷ್ಠಾನಗೊಳಿಸಿಯೇ ತೀರುತ್ತೇವೆ. ಅದಕ್ಕೋಸ್ಕರ ತಾವು ಸ್ವಲ್ಪ ಮನಸ್ಸು ಮಾಡಿ ರೈತರ ಮನವೊಲಿಸುವ ಮುಖಾಂತರ ಸತ್ಯಾಗ್ರಹ ಮಾಡುವ ಅವಶ್ಯಕತೆಯಿಲ್ಲ, ಸರ್ಕಾರ ಒಪ್ಪಿಕೊಂಡಿದೆ. ಅವರ ಮಾತನ್ನು ಒಪ್ಪಿಕೊಂಡು ಕೆಲಸ ಪ್ರಾರಂಭಿಸುವುದಕ್ಕೆ ಏನೇನು ಸಿದ್ಧತೆಗಳನ್ನು ಮಾಡಬೇಕೋ ಅದೆಲ್ಲವನ್ನೂ ಮಾಡಿದ್ದೇವೆ. ಎಸ್ಟಿಮೇಟ್, ಮ್ಯಾಪ್ಸ್ ಎಲ್ಲವೂ ಕೂಡ ರೆಡಿ ಇದೆ. ಇಲ್ಲಿಯವರೆಗೂ ಕೂಡ ನಾವು ಚಿಂತನೆ ಮಾಡಿದ್ದೇವೆ. ಒಂದು ವೇಳೆ ನಮಗೆ ಎನ್‌ವಿರಾನ್‌ಮೆಂಟ್ ಮತ್ತು ಫಾರೆಸ್ಟ್ ಕ್ಲಿಯರೆನ್ಸ್ ಬಾರದಿದ್ದರೂ ಕೂಡ ಯಾವ ಭಾಗದಲ್ಲಿ ಫಾರೆಸ್ಟ್ ಇಲ್ಲವೋ ಆ ಭಾಗದಲ್ಲಿ ಕೆಲಸ ಪ್ರಾರಂಭಿಸಿ ಇದಕ್ಕೆ ಒಂದಲ್ಲ ಒಂದು ರೀತಿಯಿಂದ ಒಂದು ರೂಪಕ್ಕೆ ತಂದು ನಮ್ಮ ಪಾಲಿನ 7.5 ಟಿ.ಎಂ.ಸಿ. ನೀರು ಏನಿದೆ, ಅದನ್ನು ಉಪಯೋಗಿಸಿಕೊಳ್ಳಬೇಕು. ಉಪಯೋಗವೆಂದರೆ, ವಿಶೇಷವಾಗಿ ಕುಡಿಯುವ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬೇಕೆಂಬ ದೃಷ್ಟಿಯಿಂದ ನಮ್ಮ ಪ್ರಯತ್ನ ಕೂಡ ಇದೆ. ಇದರಲ್ಲಿ ಯಾವುದೇ ನಿರ್ಲಕ್ಷತನವಿಲ್ಲ. ನಾವು ಒಂದು ಸಲವಲ್ಲ, ಎರಡು ಸಲ ಪತ್ರ ಬರೆದಿದ್ದೇನೆ. ಭೇಟಿ ಕೂಡ ಮಾಡಿದ್ದೇವೆ. ಮತ್ತು ಸಂಸತ್ ಸದಸ್ಯರ ಸಭೆಯಲ್ಲೂ ಕೂಡ ಈ ವಿಷಯವನ್ನು ಪ್ರಸ್ತಾಪಿಸಿದ್ದೇವೆ. ಪಾರ್ಲಿಮೆಂಟ್‌ನಲ್ಲೂ ಕೂಡ ಈ ಕುರಿತಂತೆ ಸಾಕಷ್ಟು ಸಲ ಪ್ರಸ್ತಾಪಿಸಿ ಮಂತ್ರಿಗಳ ಮೇಲೆ ಒತ್ತಡ ಹೇರುವ ಪ್ರಯತ್ನ ಮಾಡಿದ್ದೇನೆ.

ಆದರೆ, ಅದರ ಫಲಿತಾಂಶ ಹೊರ ಬಂದಿಲ್ಲದಿರುವುದರ ಬಗ್ಗೆ ನಮ್ಮೆಲ್ಲರಲ್ಲೂ ಒಂದು ಕುತೂಹಲವಿದೆ. ಅದರ ಬಗ್ಗೆ ನಾವು ಯಾವ ರೀತಿಯಾಗಿ ಮುತುವರ್ಜಿ ವಹಿಸುವ ಮೂಲಕ ಯೋಜನೆಯನ್ನು ಅನುಷ್ಠಾನ ಗೊಳಿಸಬೇಕೆಂಬ ಕಡೆ ನಮ್ಮ ಗಮನಹರಿಸಬೇಕಾಗಿದೆ. ತಾವು ಮಾತನಾಡುತ್ತಾ ಗೋವಾದಲ್ಲೂ ನಿಮ್ಮದೇ ಸರ್ಕಾರ ಇದೆ, ಇಲ್ಲೂ ನಿಮ್ಮದೇ ಇದೆ ಮತ್ತು ಕೇಂದ್ರದಲ್ಲೂ ನಿಮ್ಮದೇ ಸರ್ಕಾರ ಇದೆಯೆಂದು ತಿಳಿಸಿದಿರಿ. ಅದು ತಮಗೂ ಗೊತ್ತಿದೆ. ಸರ್ಕಾರದಲ್ಲಿ ಎಲ್ಲಾ ಪಕ್ಷದವರಿದ್ದರೂ ಕೂಡ ಅನೇಕ ಸಲ ಅವರವರ ರಾಜ್ಯದ ಪ್ರಶ್ನೆ ಉದ್ಭವವಾದಾಗ, ಯೀಲ್ಡ್ ಆಗುವುದಿಲ್ಲ, ಅದು ಬಿಜೆಪಿ ಇರಬಹುದು, ಕಾಂಗ್ರೆಸ್ ಪಕ್ಷ ಇರಬಹುದು ಅಥವಾ ಬೇರೆ ಬೇರೆ ಪಕ್ಷಗಳಿರಬಹುದು, ತಮಗೆಲ್ಲರಿಗೂ ಗೊತ್ತಿರುವಂತೆ ಒಂದೇ ಪಕ್ಷದ ಸರ್ಕಾರವಿದ್ದರೂ ಕೂಡ ನೀರಿನ ಸಮಸ್ಯೆ ಬಂದಾಗ ಅದು ಬಗೆಹರಿಯುತ್ತದೆಂದು ನನಗೇನೂ ಅನಿಸುವುದಿಲ್ಲ, ಅವರವರ ರಾಜ್ಯಕ್ಕನುಗುಣವಾಗಿ ಅವರು ವರ್ತಿಸುತ್ತಾರೆ. ಇವೊತ್ತು ನಮ್ಮ ರಾಜ್ಯಕ್ಕೆ ನ್ಯಾಯವಾಗಿ ಸಿಗಬೇಕಾಗಿರುವಂಥಾದ್ದನ್ನು ಸಿಗದಂತೆ ತಡೆಹಿಡಿದಿದ್ದಾರೆ. ಇದಕ್ಕೆ ಇವೊತ್ತು ನಾವೆಲ್ಲರೂ ಸೇರಿ ಪ್ರಯತ್ನ ಮಾಡುವ ಮೂಲಕ ಸ್ಟೇ ವೆಕೇಟ್ ಮಾಡಿಸಿ ಕೆಲಸ ಪ್ರಾರಭಿಸಬೇಕಾಗಿದೆ. ಅದಕ್ಕೇ ನಾನು ಹೇಳುತ್ತಿದ್ದೇನೆ, ಮಾನ್ಯ ಮುಖ್ಯಮಂತ್ರಿಯವರ ನೇತೃತ್ವದಲ್ಲಿ ಇನ್ನೊಂದು ಸಾರಿ ನಾವು ಹೋಗಿ ಇದಕ್ಕೆ ಒತ್ತಡವನ್ನು ತರತಕ್ಕ ಪ್ರಯತ್ನವನ್ನು ಮಾಡುತ್ತೇವೆ. ಈ ಕೆಲಸವನ್ನು ಯಾವುದೇ ರೀತಿಯಲ್ಲಿ ಕೈಬಿಡುವುದಿಲ್ಲ, ಇದಕ್ಕೆ ಸರ್ವ ಪ್ರಯತ್ನ ಮಾಡಿ ನೂರುಕೋಟಿಯಾಗಲಿ ನೂರಾ ಹತ್ತು ಕೋಟಿಯಾಗಲಿ ಖರ್ಚು ಮಾಡಿ ಈ ಯೋಜನೆ ಪೂರ್ತಿ ಮಾಡತಕ್ಕ ಜವಾಬ್ದಾರಿ ಸರ್ಕಾರದ್ದಾಗಿದೆ, ಆ ಅರಿವು ನಮಗಿದೆ, ಆ ದಿಕ್ಕಿನಲ್ಲಿ ನಾವು ಕೆಲಸವನ್ನೂ ಮಾಡುತ್ತೇವೆ ಎಂಬ ಮಾತನ್ನು ನಾನು ಖಂಡಿತವಾಗಿ ಹೇಳುತ್ತಿದ್ದೇನೆ. ಆದ್ದರಿಂದ ದಯವಿಟ್ಟು ನಾತವು ಅಪೀಲ್ ಮಾಡುತ್ತೇನೆ. ಈ ಸದನದ ಮುಖಾಂತರ ಅಲ್ಲಿರತಕ್ಕಂಥ ರೈತರೇನು ಇವತ್ತು ವಿಶೇಷವಾಗಿ ನರಗುಂದ ಮತ್ತು ನವಲಗುಂದ ಈ ಎರಡು ತಾಲ್ಲೂಕುಗಳಲ್ಲಿ ಉಪವಾಸ ಸತ್ಯಗ್ರಹವನ್ನು ಮುಂದುವರೆಸಿದ್ದಾರೆ ಅದನ್ನು ಕೈಬಿಡಬೇಕು ಮತ್ತು ಈ ಒಂದು ಯೋಜನೆಯನ್ನು ಪೂರ್ತಿಗೊಳಿಸಲು ಸಹಕಾರ ಮಾಡಬೇಕು ಎಂಬ ಮಾತನ್ನು ತಮ್ಮ ಮೂಲಕ ನಾನು ಅವರಿಗೂ

ಕೇಳಿಕೊಳ್ಳುತ್ತೇನೆ. ವಿರೋಧ ಪಕ್ಷದ ನಾಯಕರಿಗೂ ಈ ಸಂಬಂಧದಲ್ಲಿ ಕೇಳಿಕೋಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಇಲ್ಲಿ ಪಕ್ಷಾತೀತವಾಗಿ ಪಕ್ಷಭೇದ ಮರೆತು ಎಲ್ಲರೂ ಒಟ್ಟಾಗಿ ಕೆಲಸ ಮಾಡಬೇಕಾಗಿ ಅರವತ್ತು ದಿವಸಗಳಿಂದ ಅಲ್ಲಿ ಧರಣಿ ಸತ್ಯಗ್ರಹವನ್ನು ಮಾಡುತ್ತಿದ್ದಾರೆ. ಎರಡನೆಯದು ಗೋವಾ ಸರ್ಕಾರ ನಮಗೇನೂ ಯಾವುದೇ ಮುಲಾಜಿನಿಂದ ಉಪಕಾರ ಮಾಡುವ ಅಗತ್ಯವಿಲ್ಲ, ನಮ್ಮ ರೈಟ್ಸ್‌ನ್ನು ನಾವು ಕೇಳಿದ್ದೇವೆ. ಫಾರೆಸ್ಟ್ ಕ್ಲಿಯರೆನ್ಸ್, ಮೊದಲೇ 7.56 ಟಿ.ಎಂ.ಸಿ.ಗೆ ತಮಗೆ ಗೊತ್ತಿರುವಂತೆ ಕೇಂದ್ರ ಸರ್ಕಾರ ನೀರಾವರಿ ಕಮಿಷನ್‌ರವರು ಅನುಮತಿಯನ್ನೂ ಕೊಟ್ಟಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಾನೂ ಅದಕ್ಕೇ ಹೇಳಿದೆ. ಅದು ಒಂದು ಕ್ಲಿಯರೆನ್ಸ್ ಆದರೂ ಬಾಕಿದ್ದು ಬಾರದಿದ್ದರು ನೋಡೋಣ ಎನ್ನತಕ್ಕದ್ದನ್ನು ನಾನೂ ಹೇಳಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಒಂದು ಸಾರಿ ಯಾವ ಸರ್ಕಾರ ಇತ್ತು ಎನ್ನುವುದಕ್ಕಿಂತ ಆವತ್ತು ಅನುಮತಿ ಸಿಕ್ಕಿದಾಗ ನಾವು ಕೆಲಸವನ್ನು ಪ್ರಾರಂಭ ಮಾಡಬೇಕಾಗಿತ್ತು, ಅದನ್ನು ಮಾಡಲಿಲ್ಲ, ಇದು ಮುದಲನೆಯದು, ಎರಡನೆಯದು, ಇವತ್ತು ಫಾರೆಸ್ಟ್ ಕ್ಲಿಯರೆನ್ಸ್ ಬಗ್ಗೆಯೂ ಅವರದ್ದೇನೂ ತಕರಾರು ಇಲ್ಲ ನೀವು ಗೋವಾ ಸರ್ಕಾರದ ಜೊತೆ ಸಂಪರ್ಕಮಾಡಿ ಕ್ಲಿಯರ್ ಮಾಡಿಕೊಂಡು ಬನ್ನಿ ಎಂದು ನಿಮಗೆ ಪತ್ರವನ್ನೂ 28.8.2003 ರಲ್ಲಿ ಬರೆದಿದ್ದಾರೆ ಮತ್ತು 26.9.2003 ರಲ್ಲಿ ಕರ್ನಾಟಕ ರಾಜ್ಯಕ್ಕೆ ಗೋವಾ ರಾಜ್ಯದೊಂದಿಗೆ ನೀರಿನ ವಿವಾದವನ್ನು ಪರಿಹರಿಸಿಕೊಂಡು ಭಾರತ ಸರ್ಕಾರವನ್ನು ಸಂಪರ್ಕಿಸಬೇಕೆಂದು ಹೇಳಿ ಪತ್ರವನ್ನೂ ಬರೆದಿದ್ದಾರೆ. ಇಲ್ಲ ಬಹಳ ಮುಖ್ಯವಾಗಿರುವುದೇನು? ಯಾವುದೇ ಕಾರಣಕ್ಕೆ ನೀವು ಹೇಳಿದಂತೆ ರಾಜಕೀಯ ಕಾರಣಕ್ಕಾಗಿ ಗೋವಾ ಸರ್ಕಾರ ಅನುಮತಿ ಕೊಡುವುದಿಲ್ಲವೆಂದು ಇಟ್ಟುಕೊಳ್ಳಿ, ಇದು ಕಳೆದ ಐದಾರು ವರ್ಷಗಳಿಂದ, ಹತ್ತಾರು ಸರ್ಕಾರ ಬೇಡಿಕೆ ನಮ್ಮದು, ನಮ್ಮ ನ್ಯಾಯಬದ್ಧವಾಗಿ ಉಪಯೋಗಿಸಿಕೊಳ್ಳಬೇಕಾದಂಥ ಈ ನೀರನ್ನು ಉಪಯೋಗ ಮಾಡಿಕೊಳ್ಳಲು ಆಗದೇ ಇರುವಂಥ ಸಂದರ್ಭದಲ್ಲಿ ಕರ್ನಾಟಕ ಸರ್ಕಾರ ಅಂತರ ರಾಜ್ಯ ವಿವಾದವನ್ನು ಟ್ರಿಬ್ಯುನಲ್ ಅಡಿಯಲ್ಲಿ ಕೇಳಿದ್ದರೆ ಎರಡು ವರ್ಷದಲ್ಲೇ

ತೀರ್ಮಾನವಾಗುತ್ತಿತ್ತು. ಈಗ ಎರಡೇ ನಮ್ಮ ಕಣ್ಣುಮುಂದೆ ಇರುವುದು, ಒಂದು ನೀವು ಮನಸ್ಸು ಮಾಡಿದರೆ ಮುಖ್ಯಮಂತ್ರಿಗಳು ಮತ್ತು ನೀವು ಮನಸ್ಸು ಮಾಡಿದರೆ ಗೋವಾ ಸರ್ಕಾರವನ್ನು ಕೇಂದ್ರ ಸರ್ಕಾರವನ್ನು ಮನವೊಲಿಸಿ ಒಟ್ಟಾಗಿ ಮೂರು ಜನ, ನೀವಿಬ್ಬರೂ ಮುಖ್ಯಮಂತ್ರಿಗಳು, ನೀರಾವರಿ ಸಚಿವರು, ಪ್ರಧಾನಿಯವರ ಜೊತೆ ಕುಳಿತುಕೊಂಡು ಮಾತುಕತೆಮಾಡಿ ಇದನ್ನು ಬಗೆಹರಿಸುವುದಕ್ಕೆ ಕಾರ್ಯಕ್ರಮವನ್ನು ರೂಪಿಸಬೇಕು. ಇಲ್ಲವೆಂದರೆ ನಮಗೆ ಇರುವಂಥ ಒಂದೇ ಒಂದು ಮಾರ್ಗ ಇನ್ನೂ ಎರಡು ವರ್ಷವಾದರೂ ಪರವಾಗಿಲ್ಲ ಬೇಕಾದ್ದು ಆಗಲಿ ಅಂತರ್‌ರಾಜ್ಯ ವಿವಾದ ಟ್ರಿಬ್ಯುನಲ್ ಮುಂದೆ ರಚನೆ ಮಾಡಿ ಅದರ ಮುಂದೆ ಹೋಗುತ್ತೇವೆಂದಾದರೂ ಮಾಡಬೇಕು, ಇದನ್ನು ಮಾಡಿದ್ದರೆ ಮೂರು ವರ್ಷದಲ್ಲಿ ಟ್ರಿಬ್ಯುನಲ್ ತೀರ್ಪು ಬರುತ್ತಿತ್ತು. ಆ ತೀರ್ಪು ನೂರು ಪರ್‌ಸೆಂಟ್ ನಮ್ಮಪರವಾಗಿತ್ತು ಆದುದರಿಂದ ಈ ಸಮಸ್ಯೆಯನ್ನು ಬಗೆಹರಿಸಲು ಕೇವಲ ಮನವಿಯಿಂದ ಆಗುವುದಿಲ್ಲ, ನೀವು ಹೇಳಿ, ನಾನೂ ಮುಖ್ಯಮಂತ್ರಿಗಳು ಗೋವಾದ ಮುಖ್ಯಮಂತ್ರಿಗಳು ನೀರಾವರಿ ಸಚಿವರು ಕೇಂದ್ರದ ಜೊತೆ ಕುಳಿತುಕೊಂಡ ಇದನ್ನು ಬಗೆಹರಿಸಲು ಈ ವಾರದಲ್ಲಿ ಏನಾದರು ಕಾರ್ಯಕ್ರಮ ಮಾಡುತ್ತೇನೆಂದರೆ ಅಲ್ಲಿ ಸತ್ಯಾಗ್ರಹ ಮಾಡುತ್ತಿರುವವರು ಎದ್ದೇಳಬಹುದು, ಇಲ್ಲದಿದ್ದರೆ ನಿಮಗೆ ಗೊತ್ತಿದೆ ನರಗುಂದ ಮತ್ತು ನವಲಗುಂದದಲ್ಲಿ ಯಾವ ರೀತಿಯಾಗಿ ರೈತರು ಧರಣಿ ಸತ್ಯಾಗ್ರಹ ಮಾಡುತ್ತಿದ್ದಾರೆ, ಅಲ್ಲಿ ಯಾವುದೇ ರೀತಿಯ ಪಕ್ಷ ಪಂಗಡದ ಪ್ರಶ್ನೆ ಇಲ್ಲ, ಅಲ್ಲಿ ಅವರ ಹಕ್ಕಿಗಾಗಿ ಕುಡಿಯುವ ನೀರಿಗಾಗಿ ನೀರಾವರಿ ಯೋಜನೆ ಇಲ್ಲವೆಂದು ಬರಗಾಲಕ್ಕೆ ಸಿಕ್ಕಿ ತತ್ತರಿಸುತ್ತಿರುವುದರಿಂದ ಈ ಪರಿಸ್ಥಿತಿ ಬಂದಿದೆ, ಆದ್ದರಿಂದ ಮುಖ್ಯಮಂತ್ರಿಗಳು ಏನಾದರು ವಿಶೇಷವಾದ ಗಮನಕೊಟ್ಟು ತಾವು ಗೋವಾದ ಮುಖ್ಯಮಂತ್ರಿಗಳನ್ನು, ನೀರಾವರಿ ಸಚಿವರನ್ನು ಕಂಡು, ನಾವ್ಯಾರೋ ಸರ್ವ ಪಕ್ಷದವರು ಹೋಗಿ ಪ್ರಧಾನಿಯವರಿಗೆ ಮನವಿಯನ್ನು ಕೊಟ್ಟು ಈ ಸಮಸ್ಯೆಯು ಬಗೆಹರಿಯುತ್ತದೆಂದು ನನಗೇನೋ ಅನ್ನಿಸುವುದಿಲ್ಲ, ನಾಳೆ ಕಾನೂನು ಸುವ್ಯವಸ್ಥೆ ಹದಗೆಟ್ಟು ಬೇರೆ ರೀತಿಯ ರೂಪ ತೆಗೆದುಕೊಳ್ಳದಿರಬೇಕಾದರೆ ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಸ್ವತಃ ನೀವೇನಾದರೂ ಗಮನ ಕೊಟ್ಟರೆ ಈ ಸಮಸ್ಯೆಗೆ ಪರಿಹಾರ ಸಿಗಬಹುದು

ಅದಕ್ಕೋಸ್ಕರ ಇದನ್ನು ಯಾವ ರೀತಿಯಾಗಿ ಮಾಡಬಹುದು ಎಂಬ ಬಗ್ಗೆ ಸ್ಪಷ್ಟವಾದ ಆಶ್ವಾಸನೆ ಕೊಟ್ಟರೆ ನಾವು ನಿಮಗೆ ಸಹಕಾರ ಕೊಡಲು ಸಿದ್ಧರಿದ್ದೇವೆ, ಸತ್ಯಾಗ್ರಹ ಯಾವುದೇ ಪಕ್ಷದ ಪ್ಲ್ಯಾಗನ್ನು ಇಟ್ಟುಕೊಂಡು ಮಾಡುತ್ತಿಲ್ಲ, ಅರವತ್ತು ದಿವಸಗಳಾಗಿ ಹೋಗಿದೆ, ಇಷ್ಟೋತ್ತಿಗಾಗಲೇ ನಮ್ಮ ನೀರಾವರಿ ಸಚಿವರು ಹೋಗಿ ಅವರನ್ನು ಮಾತನಾಡಿಸಿ ಅವರನ್ನು ಕನ್ವಿನ್ಸ್ ಮಾಡುವ ಕೆಲಸ ಮಾಡಬೇಕಾಗಿತ್ತು, ಅದನ್ನೂ ಮಾಡಲಿಲ್ಲ, ನಿಮ್ಮ ಪಾಡಿಗೆ ನೀವು ಮಾಡಿದ ಸತ್ಯಾಗ್ರಹವನ್ನಾದರೂ ಮಾಡಿ ಚಳುವಳಿಯನ್ನಾದರೂ ಮಾಡಿ ಎಂದರೆ, ಇವತ್ತು ಬಂದ್ ಮಾಡುತ್ತಿದ್ದಾರೆ, ನಾಳೆ ಇನ್ನೊಂದು ಆಗುತ್ತದೆ, ನಾಳೆ ಕಾನೂನು ಸುವ್ಯವಸ್ಥೆಗೆ ಧಕ್ಕೆ ಬರುತ್ತದೆ, ರೈತರು ಬೀದಿಗೆ ಇಳಿಯುತ್ತಾರೆ, ನವಲಗುಂದ ಮತ್ತು ನವಲಗುಂದದ ಇತಿಹಾಸ ನಮಗೆ ಗೊತ್ತಿದೆ, ಈ ರೀತಿ ಯಾವುದೇ ತೊಂದರೆಗಳು ಆಗಬಾರದು ಎಂದಿದ್ದರೆ ದಯಾಮಡಿ ನೀವು ಇವತ್ತು ಮಧ್ಯೆ ಪ್ರವೇಶ ಮಾಡಿ ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್‌: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಖರ್ಗೆಯವರು ಉತ್ತರವನ್ನೇನು ಕೊಟ್ಟರು ನಾವೆಲ್ಲಾ ಪ್ರಯತ್ನ ಮಾಡುತ್ತಿದ್ದೇವೆ ಆಗುತ್ತಿಲ್ಲವೆನ್ನತಕ್ಕದ್ದು, ಇವತ್ತು ನಮಗೆ ನ್ಯಾಯಯುತವಾದಂಥ ಬೇಡಿಕೆ ಇದೆ, 7.56 ಟಿ.ಎಂ.ಸಿ ನೀರು ನಾನು ಕುಡಿಯುವ ನೀರಿನ ಬಗ್ಗೆ ಹೇಳುತ್ತಿದ್ದೇನೆ, ಬಹುಶಃ ಇಡೀ ರಾಷ್ಟ್ರದ ಯಾವುದೇ ರಾಜ್ಯದಲ್ಲಿ ಈ ಒಂದು ಯೋಜನೆಗಳನ್ನು ತೆಗೆದುಕೊಂಡಾಗ ಕುಡಿಯುವ ನೀರಿನ ಸಮಸ್ಯೆ ಬಂದಂಥ ಸಂದರ್ಭದಲ್ಲಿ ಇವತ್ತು ಕಾವೇರಿಯಿಂದ ಚೆನ್ನೈಗೆ ನೀರನ್ನು ಕೊಡುತ್ತಿದ್ದೇವೆ, ಇವತ್ತು ಕುಡಿಯುವ ನೀರಿನ ಸಲುವಾಗಿ ಎಂದು ಬಂದಂಥ ಸಂದರ್ಭದಲ್ಲಿ ಯಾವುದೇ ರಾಜ್ಯ ತಕರಾರು ಮಾಡಿದರೆ ಅದು ಸ್ಟ್ಯಾಂಡ್ ಆಗಲಿಕ್ಕಿಲ್ಲ, ಯಾವುದೇ ಟ್ರಿಬ್ಯುನಲ್ ನಲ್ಲಿ ಸ್ಟ್ಯಾಂಡ್ ಆಗಲಿಕ್ಕಿಲ್ಲ, ಹೀಗಾಗಿ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಇಷ್ಟು ಏಕೆ ಲೇಟ್ ಆಗುತ್ತದೆ ಎಂಬ ಪ್ರಶ್ನೆ ಇದೆ. ಮಾನ್ಯ ಖರ್ಗೆಯವರು ಹೇಳಿದರು, ನಾವೆಲ್ಲಾ ಪ್ರಯತ್ನ ಮಾಡುತ್ತಿದ್ದೇವೆ, ಸಭೆಯಾಯಿತು, ನಾವು ಹೋಗಿ ಬಂದಿದ್ದೇವೆ, ಪ್ರಧಾನ ಮಂತ್ರಿಗಳನ್ನು ಭೇಟಿಯಾಗಿ ಬಂದಿದ್ದೇವೆ, ಜಲಸಂಪನ್ಮೂಲ ಸಚಿವರನ್ನು

ಭೇಟಿ ಮಾಡಿದೆವು, ಆದರೂ ಏನೂ ಆಗುತ್ತಿಲ್ಲ, ನೋಡಬೇಕು ಹಾಗಾದರೆ ಇದಕ್ಕೆ ಟೈಮ್ ಬೌಂಡ್‌ನ್ನು ನಿಗದಿ ಮಾಡಬೇಕಲ್ಲಾ ? ನಾವು ಹಿಂದಿನ ಅಧೀವೇಶನದಲ್ಲಿ ಕೇಳಿದ್ದೇವೆ, ಈ ಅಧಿವೇಶನದಲ್ಲಿ ಕೇಳುತ್ತಿದ್ದೇವೆ, ಮತ್ತೆ ಇನ್ನೊಂದು ಮೂರು ತಿಂಗಳು ಬಿಟ್ಟು ಮತ್ತೊಂದು ಅಧಿವೇಶನ ಬರುತ್ತದೆ, ಆಗಲೂ ಇದೇ ಪ್ರಶ್ನೆ ಕೇಳುತ್ತೇವೆ, ಅಲ್ಲಿ ರೈತರು ಹೋರಾಟವನ್ನು ಮುಂದುವರೆಸುತ್ತಾರೆ, ಹುಬ್ಬಳ್ಳಿ-ಧಾರವಾಡದಲ್ಲಿ ಕುಡಿಯುವ ನೀರಿನ ತೊಂದರೆಯನ್ನು ಅನುಭವಿಸುತ್ತಿದ್ದಾರೆ, ಹಾಗಾಗಿ ಇದಕ್ಕೆ ಅಂತ್ಯ ಯಾವಾಗ ಎಂದು ಕೇಳುತ್ತಿದ್ದೇನೆ? ಇದಕ್ಕೊಂದು ಅಂತ್ಯ ಬೇಕಲ್ಲಾ ? ಇವತ್ತು ಆಂಧ್ರ ಪ್ರದೇಶ 4580 ಕೋಟಿ ರೂಪಾಯಿಯಷ್ಟು ಅಕ್ರಮವಾದ ನೀರಾವರಿ ಕಾಮಗಾರಿಯನ್ನು ರಾಜಾರೋಷವಾಗಿ ಮಾಡುತ್ತಿದೆ. ಅದರ ಬಗ್ಗೆ ನಾವು ಟ್ರಿಬ್ಯುನಲ್ ಮುಂದೆ ಹೋಗಿ ಅರ್ಜಿ ಕೊಟ್ಟರೂ ತಡೆಯಾಜ್ಞೆ ಸಿಗುತ್ತಿಲ್ಲ, ಇವತ್ತು ತಡೆಯಾಜ್ಞೆ ಇರುವಂತದ್ದು ಕೇವಲ ಒಂದು ಇಲಾಖೆಯಿಂದ ಮಾತ್ರ, ಯಾವುದೇ ಒಂದು ಕೋರ್ಟ್ ಈ ಒಂದು ಯೋಜನೆಗೆ ತಡೆಯಾಜ್ಞೆಯನ್ನು ಕೊಟ್ಟಿಲ್ಲ ಹಾಗಾದರೆ ನಾನು ಕೇಂದ್ರ ಸರ್ಕಾರ ಇವತ್ತು ನಿಮ್ಮ ಯಾವುದೇ ಒತ್ತಡಕ್ಕೆ ಯಾವುದೇ ರಾಜಕೀಯವಾದ ಒತ್ತಡಕ್ಕೆ ಬಗ್ಗದಿದ್ದರೆ ಒಂದೇ ಒಂದು ದಾರಿ ನಾನು ಹೇಳುತ್ತಿದ್ದೇನೆ ರಾಜ್ಯ ಸರ್ಕಾರಕ್ಕೆ ಅವರದ್ದು ತಡೆಯಾಜ್ಞೆ ಇರಲಿ ಅದನ್ನು ಉಲ್ಲಂಘನೆ ಮಾಡಿ ನೀವು ಕಾಮಗಾರಿ ಪ್ರಾರಂಭ ಮಾಡಿ, ಆಗ ಬರುತ್ತಾರೆ, ಅವರೂ ಬರುತ್ತಾರೆ ಎಲ್ಲರೂ ಬರುತ್ತಾರೆ, ಆಗ ಗೋವಾದವರೂ ಬರುತ್ತಾರೆ ಕೇಂದ್ರ ಸರ್ಕಾರದವರೂ ಬರುತ್ತಾರೆ ಏನು ನಡೆಯುತ್ತಿದೆಯೆಂದು ಕೇಳುತ್ತಾರೆ, ಇವತ್ತು ಕಾಮಗಾರಿ ಪ್ರಾರಂಭ ಮಾಡಿ, ಇವತ್ತು ಆಂಧ್ರ ಪ್ರದೇಶ ರಾಜಾರೋಷವಾಗಿ 4500 ಕೋಟಿ ರೂಪಾಯಿದನ್ನು ಮಾಡುತ್ತಿದ್ದಾರೆ, ಹಾಗಾದರೆ ನೀವು ನೂರು ಕೋಟಿ ರೂಪಾಯಿಗಳ ಪ್ರಾಜೆಕ್ಟ್‌ನ್ನು ಪ್ರಾರಂಭ ಮಾಡಿ, ಕಳಸಾಬಂಡೂರಿ ನಾಲಾ ಯೋಜನೆ ನಮ್ಮ ಕರ್ನಾಟಕ ಪ್ರದೇಶದಲ್ಲೇ ಬರುವಂಥದ್ದು ಹೀಗಾಗಿ ಇದನ್ನಾದರೂ ಮಾಡಿ, ಹಾಗಾದರೂ ಬಿಸಿ ಹತ್ತುತ್ತದೆ. ಇಲ್ಲದಿದ್ದರೆ, ನೀವು ಮನವಿ ಪತ್ರ ಕೊಡುವಂಥದ್ದು ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡುವಂಥದ್ದು ಇದೇ ನಡೆಯುತ್ತಿರುತ್ತದೆ ಬೆಳಗ್ಗೆಯಿಂದ ಸಂಜೆಯವರೆಗೆ ಇದೇ ನಡೆಯುತ್ತಿರುತ್ತದೆ. ಹೀಗಾಗಿ ಇದಕ್ಕೆ ಏನಾದರೂ ಒಂದು ಸ್ಪಷ್ಟವಾದ ಉತ್ತರಬೇಕಾಗುತ್ತದೆ. 21ನೇ ತಾರೀಖು ರೈತ

ಹುತಾತ್ಮ ದಿವಸವಿದೆ, ಒಂದು ಲಕ್ಷ ಜನರು ಅಲ್ಲಿ ಸೇರುತ್ತಿದ್ದಾರೆ, ಅಲ್ಲಿ ದೊಡ್ಡದಾದ ಒಂದು ಹೋರಾಟ ನಡೆಯುವಂಥದ್ದು ಇದೆ, ಆದ್ದರಿಂದ 21ನೇ ತಾರೀಖಿನ ಒಳಗಾಗಿ ಏನಾದರೂ ಒಂದು ಸ್ಪಷ್ಟವಾದ ನಿಲುವನ್ನು ಸರ್ಕಾರ ತೆಗೆದುಕೊಂಡು ಕೇಂದ್ರ ಸರ್ಕಾರ ಗಮನಹರಿಸತಕ್ಕ ಕೆಲಸ ಮಾಡಿದರೆ ಇದಕ್ಕೆ ಏನಾದರೂ ಪರಿಹಾರ ಸಿಗಲು ಸಾಧ್ಯವಿದೆ. ಇಲ್ಲದಿದ್ದರೆ ಇಂಥ ಸಣ್ಣ ಪುಟ್ಟ ಯೋಜನೆಗಳನ್ನೂ ಕರ್ನಾಟಕ ರಾಜ್ಯದವರು ನಾವು ಮಾಡಲು ಆಗುವುದಿಲ್ಲವೆಂದರೆ ಇನ್ನು ಯಾವುದನ್ನು ನಾವು ಮಾಡಲು ಸಾಧ್ಯವಾಗುತ್ತದೆ ಎಂಬುದನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ, ಮಾನ್ಯ ಮುಖ್ಯಮಂತ್ರಿಯವರು ಇದಕ್ಕೆ ಸ್ಪಷ್ಟವಾದ ಉತ್ತರವನ್ನು ಕೊಡಬೇಕಾಗುತ್ತದೆ. ತಕ್ಷಣವೇ ಪ್ರಧಾನ ಮಂತ್ರಿಗಳನ್ನು ಎಲ್ಲರೂ ಕೂಡಿ, ಸರ್ವ ಪಕ್ಷವನ್ನು ತೆಗೆದುಕೊಂಡು ಹೋಗಿ ಭೇಟಿಯಾಗೋಣ, ಇವತ್ತು ಕೇಂದ್ರದ ಜಲಸಂಪನ್ಮೂಲ ಸಚಿವರಾದ ಶ್ರೀ ಪ್ರಿಯರಂಜನ್ ದಾಶ್ ಮುನ್ಷಿಯವರು ಇದನ್ನು ಒಂದು ಹಂತದಲ್ಲಿ ಒಪ್ಪಿಕೊಂಡಿದ್ದರು, ನಾನು ಇನ್ನು ಹತ್ತು ದಿವಸದಲ್ಲಿ ಇದನ್ನು ಕ್ಲಿಯರ್ ಮಾಡುತ್ತೇನೆಂದು ಹೇಳಿದಂಥದ್ದು ಇಲ್ಲಿಯವರೆಗೆ ಏಕೆ ಆಗಲಿಲ್ಲ ಎನ್ನುವಂಥದ್ದು ಹೀಗಾಗಿ ಮಾನ್ಯ ಮುಖ್ಯಮಂತ್ರಿಯವರು ಇದರ ಬಗ್ಗೆ ತಮ್ಮ ಸ್ಪಷ್ಟವಾದ ನಿಲುವನ್ನು ಹೇಳಬೇಕೆಂದು ವಾದವನ್ನು ಮಾಡುತ್ತೇನೆ.

ಶ್ರೀ ಸಿ.ಸಿ. ಪಾಟೀಲ್ : ಜನವರಿ 14ರ ಒಳಗಾಗಿ ಜಲಸಂಪನ್ಮೂಲ ಸಚಿವರು ಇದನ್ನು ಇತ್ಯರ್ಥ ಮಾಡುತ್ತೇನೆಂದು ಹೇಳಿದ್ದರು.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, ಈ ದಿನ ವಿರೋಧ ಪಕ್ಷದ ನಾಯಕರು ಮತ್ತು ಜಗದೀಶ್ ಶೆಟ್ಟರ್‌ರವರು ಕಳಸಾಬಂಡೂರಿ ನಾಲದ ಬಗ್ಗೆ ಸ್ಪಷ್ಟವಾದ ಸರ್ಕಾರದ ಧೋರಣೆಯೇನಿದೆ. ಸಾಕಸ್ಟು ಸಲ ಇದರ ಬಗ್ಗೆ ನಾವು ಪ್ರತಿಪಾದನೆ ಮಾಡಿದ್ದೇವೆ. ಆದರೂ ಇತ್ಯರ್ಥವಾಗುತ್ತಿಲ್ಲವೆನ್ನತಕ್ಕ ಮಾತನ್ನೂ ಪ್ರಸ್ತಾಪ ಮಾಡಿದ್ದಾರೆ. ಇವತ್ತು ಈಗಾಗಲೆ ನಾವು ಹೇಳಿದ್ದೇವೆ, ನೀರಾವರಿ ಸಮಸ್ಯೆಗಳ ಬಗ್ಗೆ ಸರ್ಕಾರ ಒಂದಾಗಿದೆ, ಇದರಲ್ಲಿ ನೀವೇನು ಕೂಡ ರಾಜಕೀಯವಾಗಿ ಪ್ರಸ್ತಾಪ ಮಾಡುತ್ತಿಲ್ಲವೆಂಬುದು ನನ್ನ ಭಾವನೆ, ನೀವು ಎಷ್ಟೇ ಬಹಳ ಹರಿತವಾಗಿ ಹೇಳಿದರೂ ಕೂಡ ಅದಕ್ಕೆ ನಾವು ಸ್ಪಂದಿಸುತ್ತಿದ್ದೇವೆ. ಈಗಾಗಲೆ ನಮ್ಮ

ನೀರಾವರಿ ಸಚಿವರು ಏನೇನು ಪ್ರಯತ್ನವನ್ನು ನಾವು ಮಾಡಿದ್ದೇವೆ ಎಂಬ ಬಗ್ಗೆ ಸಮರ್ಪಕವಾಗಿ ಉತ್ತರವನ್ನು ನಿಮ್ಮೆದುರಿಗೆ ಇಟ್ಟಿದ್ದಾರೆ. ಇದು ನಾವು ನೀವು ಕೂಡಿ ಹೋರಾಟ ಮಾಡತಕ್ಕ ಒಂದು ಸಮಯ ಬಂದಿದೆ. ಕೃಷ್ಣ ಗೋದಾವರಿ ಬಗ್ಗೆ ಪ್ರಸ್ತಾಪ ಮಾಡಿದಾಗ ಸಹ ನಾವು ಹೇಳಿದ್ದೆವು ಅದಕ್ಕೆ ನಾವು ಸ್ಪಂದಿಸಿ ಸರ್ವ ಪಕ್ಷದ ನಿಯೋಗ ಹೋಗಿದ್ದೇವೆ. ಅದು ಸ್ವಲ್ಪ ಕಾರ್ಯಗತವಾಗತಕ್ಕ ಪರಿಸ್ಥಿತಿಯಲ್ಲಿದೆ. ಆದರು ಯಾವ್ಯಾವ ಪ್ರಾಜೆಕ್ಟ್ ಪ್ರಾರಂಭ ಮಾಡಿ ಮಾಡುತ್ತಿಲ್ಲವೆಂಬ ಮಾತನ್ನು ಹೇಳಿದ್ದಾರೆ. ಇವತ್ತು ಎರಡೂ ರಾಜ್ಯಗಳ ಮಧ್ಯದಲ್ಲಿ ಇರತಕ್ಕ ವಾದವನ್ನು ಬಗೆಹರಿಸಬೇಕಾದರೆ ಸ್ವಲ್ಪ ಸಮಯ ಕೂಡ ಆಗುತ್ತಿದೆ. ಅದಕ್ಕೆ ಮಲ್ಲಿಕಾರ್ಜುನ ಖರ್ಗೆಯವರು ಸ್ವತಃ ಇದಕ್ಕೆ ಮಾನ್ಯ ಆಸ್ಕರ್ ಫರ್ನಾಂಡೀಸ್‌ರವರು ಕೇಂದ್ರ ಸರ್ಕಾರದ ಸಚಿವರಾಗಿದ್ದಾರೆ ಅವರ ಸಹಾಯದಿಂದ ಕರ್ನಾಟಕ ಭವನದಲ್ಲಿ ಸಮಸ್ತ ಲೋಕಸಭಾ ಸದಸ್ಯರನ್ನು ಕರೆಸಿ ಶ್ರೀ ಪ್ರಿಯರಂಜನ್ ದಾಸ್ ಮುನ್ಷಿ ಯವರನ್ನೂ ಕರೆಸಿ ಮಾತನಾಡಿದ್ದಾರೆ, ಇಲ್ಲಿ ಕೂಡ ಪ್ರಿಯರಂಜನ್‌ದಾಸ್ ಮುನ್ಷಿ ಬಂದಾಗ ಆ ಭಾಗದಲ್ಲಿರತಕ್ಕ ಬೆಳಗಾಂನ ಶಾಸಕರು ಮತ್ತು ಸಚಿವರಾದ ಹುಕ್ಕೇರಿಯವರನ್ನೂ ಕೂಡ ಸಚಿವರಾದ ಖರ್ಗೆಯವರು ಕರೆದುಕೊಂಡು ಹೋಗಿ ಈ ಸಮಸ್ಯೆಗಳ ಬಗ್ಗೆ ಅವರೆದುರಿಗಿಟ್ಟಿದ್ದಾರೆ. ನಾನೂ ಕೂಡ ಅವರೊಡನೆ ಮಾತನಾಡಿದ್ದೇನೆ. ನಮ್ಮ ರಾಜ್ಯದ ಆ ಭಾಗದಲ್ಲಿರುವ ಬೆಳಗಾಂ, ಹುಬ್ಬಳ್ಳಿ, ಧಾರವಾಡದಲ್ಲಿ ಕುಡಿಯುವ ನೀರಿನ ತೊಂದರೆ ಇದೆ ಎಂದು ನಾನು ಪ್ರಸ್ತಾಪ ಮಾಡಿದ್ದೇನೆ. ಇವತ್ತು ಅಲ್ಲೂ ಕೂಡ ನಮ್ಮ ಸರ್ಕಾರ ಇದೆ. ಸರ್ಕಾರ ಯಾವುದೇ ಇದ್ದರೂ ಕೂಡ, ತಮ್ಮ ರಾಜ್ಯದ ಸಮಸ್ಯೆಗಳ ಬಗ್ಗೆ ಅವರೂ ಕೂಡ ಪ್ರತಿಪಾದನೆ ಮಾಡುತ್ತಾರೆ. ಆದರೂ ಕೂಡ ಇದು ನ್ಯಾಯವಾಗಿ ನಮಗೆ ಆಗಲೇ ಬೇಕು, ಅಲ್ಲಿರತಕ್ಕಂಥ ಕುಡಿಯುವ ನೀರಿನ ತೊಂದರೆ ನಿವಾರಣೆ ಆಗತಕ್ಕಂಥ ಮತ್ತು ರೈತರಿಗೆ ನೀರು ಸಿಗತಕ್ಕಂಥದ್ದು ಏನಿದೆ, ಈಗಾಗಲೇ ಅಲ್ಲಿ ಪ್ರತಿಭಟನೆ ಪ್ರಾರಂಭ ಮಾಡಿದ್ದಾರೆ. ರೈತರು 21ನೇ ತಾರೀಖಿನ ದಿವಸ ಬಹಳ ಬೃಹತ್ತರವಾದಂತಹ ಸಮಾವೇಶ ನಡೆಸಲಿದ್ದಾರೆ ಎನ್ನುವಂತಹ ಮಾತನ್ನು ಹೇಳಿದ್ದೀರಿ. ಅದಕ್ಕೆ ಈಗಾಗಲೇ ಮಾನ್ಯ ನೀರಾವರಿ ಸಚಿವರು ತಾವು ತಂದಂತಹ ನಿಲುವಳಿ ಸೂಚನೆಗೆ ಸ್ಪಂದಿಸಿ, ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಅತಿ ಶೀಘ್ರದಲ್ಲೇ ಮತ್ತೊಮ್ಮೆ ಕಳಸಾ–ಬಂಡೂರಿ

ಬಗ್ಗೆ ಸರ್ವಪಕ್ಷಗಳ ನಿಯೋಗವೊಂದನ್ನು ಕರೆದುಕೊಂಡು ಹೋಗಿ, ನೀವು ಎಲ್ಲಿ ಕೇಂದ್ರ ನೀರಾವರಿ ಇಲಾಖೆಯಲ್ಲಿ ಮಾಡತಕ್ಕಂಥ ಹರಿನಾರಾಯಣ್ ಆಗಲಿ, ಇವತ್ತು ನಮ್ಮ ರಾಜ್ಯಕ್ಕೆ ನ್ಯಾಯ ಸಿಗುತ್ತಿಲ್ಲ, ಬಹಳ ದಿವಸ ಆಗುತ್ತಿದೆ, ನಾವು ಸಾಕಷ್ಟು ಸಲ ಇದರ ಬಗ್ಗೆ ಪ್ರತಿಪಾದನೆ ಮಾಡಿದರೂ ಕೂಡ ಈ ಒಂದು ಸಮಸ್ಯೆ ಬಗೆಹರಿಸುತ್ತಿಲ್ಲ ಅನ್ನತಕ್ಕಂಥ ಮಾತನ್ನು ಹೇಳಿದ್ದೇನೆ. ಅದಕ್ಕೆ ನಾವು ಕೇಂದ್ರ ಸರ್ಕಾರಕ್ಕೆ ಹೋಗೋಣ. ಇದಕ್ಕೆ ಒತ್ತಾಯ ತರತಕ್ಕಂಥ ರೀತಿಯಲ್ಲಿ ಮಾಡಿ, ಕಳಸಾ-ಬಂಡೂರಿ ಏನಿದೆ, ಅದರ ಬಗ್ಗೆ ಮಾನ್ಯ ಪ್ರಧಾನ ಮಂತ್ರಿಗಳಿಗೆ, ನಾವು ಒಂದೆರಡು ಗಂಟೆಗಳ ಕಾಲ, ನನಗನ್ನಿಸುತ್ತಿದೆ, ನಿಮ್ಮ ಪಕ್ಷದ ಲೋಕಸಭಾ ಸದಸ್ಯರೂ ಕೂಡ ಹೋಗಿ ಭೇಟಿಯಾಗಿ ಬಂದಿದ್ದಾರೆ. ಅದೂ ಕೂಡ ಆಗಿದೆ. ಇದು ಕಳಸಾ-ಬಂಡೂರಿ ಮೇಲೆ ಹೆಚ್ಚಿನ ಒತ್ತಡ ತರತಕ್ಕಂಥ ರೀತಿಯಲ್ಲಿ ಕೆಲಸ ಆಗಿದೆ. ಆದರೆ ನವೆಲ್ಲರೂ ಕೂಡ ಸರ್ವ ಪಕ್ಷಗಳ ನಿಯೋಗ ಹೋಗಿ ಇದರ ಬಗ್ಗೆ ಮಾಡಲೇ ಬೇಕು ಎನ್ನತಕ್ಕಂಥ ರೀತಿಯಲ್ಲಿ ಒತ್ತಾಯ ತರತಕ್ಕಂಥ ರೀತಿಯಲ್ಲಿ ಮಾಡುತ್ತೇವೆ. ಎನ್ನತಕ್ಕಂಥ ತಮ್ಮ ಏನು ನಿಲುವಳಿ ಸೂಚನೆಯನ್ನು ತಂದಿದ್ದೀರಿ, ಏನು ತಾವು ಮಾತನಾಡಿದ್ದೀರಿ, ಅದಕ್ಕೆ ಸ್ಪಂದಿಸಿ, ಈಗಾಗಲೇ ನಮ್ಮ ಖರ್ಗೆಯವರು ಹೇಳಿಕೆ ಕೊಟ್ಟಿದ್ದಾರೆ. ನಾನು ರಾಜ್ಯದ ಮುಖ್ಯಮಂತ್ರಿಯಾಗಿ ಇದರ ಬಗ್ಗೆ ಹೆಚ್ಚಿನ ಒತ್ತಡ, ತಮ್ಮ ಜೊತೆಗೆ ಹೋಗಿ ಮಾಡತಕ್ಕಂಥದ್ದು, ಪ್ರಾಮಾಣಿಕ ಪ್ರಯತ್ನ ನಾವು ಮಾಡುತ್ತೇವೆ. ರೈತರು ಈಗೇನು ನಿರಶನವನ್ನು ಮಾಡುತ್ತಿದ್ದಾರೋ, ಅದನ್ನು ಕೈಬಿಡಬೇಕು. ನಿರಶನ ಮಾಡಿದರೆ ಏನಾಗುತ್ತದೆ. ಎಂದರೆ, ಸಮಸ್ಯೆಗಳನ್ನು ಹೆಚ್ಚಿನ ರೀತಿಯಲ್ಲಿ ಸದನ ನಡೆಯತಕ್ಕಂಥ ಕಾಲದಲ್ಲಿ ಒತ್ತಾಯ ಮಾಡತಕ್ಕಂಥದ್ದು ಪ್ರಜಾಪ್ರಭುತ್ವದಲ್ಲಿ ಮಾಡತಕ್ಕಂಥ ಕೆಲಸ. ಅದು ಆಗಿದೆ. ತಾವೆಲ್ಲರೂ ಕೂಡ ವಿರೋಧ ಪಕ್ಷದಲ್ಲಿದ್ದು, ಅಲ್ಲಿನ ಸಮಸ್ಯೆಯನ್ನು ನಮ್ಮೆದುರುಗೆ ತಂದಿದ್ದೀರಿ. ಇವತ್ತು ಸಭಾಧ್ಯಕ್ಷರೆ, ವಿರೋಧ ಪಕ್ಷದ ನಾಯಕರ ಮುಖಾಂತರ, ಈ ಒಂದು ಸರ್ವ ಪಕ್ಷಗಳ ನಿಯೋಗ ಹೋಗತಕ್ಕಂಥ ಹಿನ್ನೆಲೆಯಲ್ಲಿ ಎಲ್ಲಾ ರೈತರೂ ಕೂಡ ಅವರ ಚಳವಳಿ, ನಿರಶನವನ್ನು ಅವರು ಅಂತ್ಯಗೊಳಿಸಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸಾರ್, ನಾನು ನಿಮ್ಮಲ್ಲಿ ಒಂದೇ ಒತ್ತಾಯ ಮತ್ತು ವಿನಂತಿ ಮಾಡುತ್ತೇನೆ. ನಾನೇನು ನಿಮಗೆ ರಾಜಕಾರಣವನ್ನು ಹೇಳಿಕೊಡುವಂತಹ ಅಗತ್ಯ ಇಲ್ಲ. ಇವತ್ತು ನೀವು ಮುಖ್ಯಮಂತ್ರಿಗಳಾಗಿದ್ದೀರಿ, ಸಮ್ಮಿಶ್ರ ಸರ್ಕಾರ ಇದೆ. ಚುನಾವಣೆ ಸಮಯದಲ್ಲಿ ನಾವು ಮತ್ತು ನೀವೆಲ್ಲಾ ಕಳಸಾ–ಬಂಡೂರಿ ಯೋಜನೆಯನ್ನು ನಾವು ಜಾರಿಗೆ ತರುತ್ತೇವೆ ಎಂದು ಭರವಸೆ ಕೊಟ್ಟು, ಇಲ್ಲಿಗೆ ಬಂದಿದ್ದೇವೆ. ನೀವು ಅಲ್ಲಿ ಕುಳಿತಿರಬಹುದು, ನಾವು ಇಲ್ಲಿ ಕುಳಿತಿರಬಹುದು. ಈಗ ನಿಮಗೆ ಗೊತ್ತಿರುವಂತೆ ಸನ್ಮಾನ್ಯ ಮುಖ್ಯಮಂತ್ರಿಗಳೇ, ಇವತ್ತು ಆಂಧ್ರ ಇರಬಹುದು, ಮಹಾರಾಷ್ಟ್ರ ಇರಬಹುದು, ಯಾರೇ ಇರಬಹುದು, ಟ್ರಿಬ್ಯೂನಲ್ ತೀರ್ಮಾನವನ್ನು, ಸುಪ್ರೀಂಕೋರ್ಟಿನ ತೀರ್ಮಾನವನ್ನು ಧಿಕ್ಕರಿಸಿ, ಅವರು ಯೋಜನೆಗಳನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಕೊನೆಯ ಪಕ್ಷ, ಈಗಾಗಲೇ ಅದಕ್ಕೆ estimate, plan ಹಣ ತೆಗೆದಿಟ್ಟು, ಎಲ್ಲಾ ಮಂಜೂರಾತಿಯಾಗಿ ಐದು ವರ್ಷಗಳು ಕಳೆದು ಹೋಯಿತು. ಈಗ ನಮ್ಮ ಬಾರ್ಡರ್‌ನಲ್ಲಿ, ಕರ್ನಾಟಕ ಭಾಗದಲ್ಲಿ ಬರುವಂತಹ ಕೆಲಸವನ್ನು ನಾವು ಪ್ರಾರಂಭ ಮಾಡೋಣ. ಅದರ ಮಧ್ಯೆ ಗೋವಾ ಸರ್ಕಾರವನ್ನು convince ಮಾಡುವುದಕ್ಕೆ ಮುಖ್ಯಮಂತ್ರಿಗಳನ್ನು convince ಮಾಡುವುದಕ್ಕೆ, ಮಾನ್ಯ ಪ್ರಧಾನಮಂತ್ರಿಗಳನ್ನು convince ಮಾಡುವುದಕ್ಕೆ, ಏನು ಬೇಕೋ, ಅದಕ್ಕೆ ನಿಯೋಗ ಕೂಡ ಹೋಗೋಣ. ಇಲ್ಲಿ ಈ ವರ್ಷ, ಈ ತತ್‌ಕ್ಷಣ ನಮ್ಮ ಏರಿಯಾದಲ್ಲಿ ನಾವು ಕೆಲಸ ಪ್ರಾರಂಭ ಮಾಡೋಣ. ಈಗ ಉದಾಹರಣೆಗೆ, ಆಂಧ್ರ ಯಾರನ್ನು ಕೇಳಿ ಮಾಡುತ್ತಿದೆ? ಅವರೇನು ಮುಲಾಜಿನಿಂದ ಮಾಡುತ್ತಿದಾರೆಯೇ? ಇವತ್ತು ಕೇಂದ್ರ ಸರ್ಕಾರ ಒಂದು ಸಾರಿ ಅನುಮತಿ ಕೊಟ್ಟು, ಅದು ಸ್ಟೇ ಇರಬಹುದು, ಆದರೆ ನಾವು ನಮ್ಮ ಏರಿಯಾದಲ್ಲಿ ಕೆಲಸ ಮಾಡುವುದಕ್ಕೆ ಏನಾದರೂ ಅಡ್ಡಿ–ಆತಂಕಗಳಿವೆ ಎಂದು ನನಗನ್ನಿಸುವುದಿಲ್ಲ. ಇದರಿಂದ ಆ ಎರಡೂ ಜಿಲ್ಲೆಯ ರೈತರಿಗೂ ಸಹ ಕೆಲಸ ಪ್ರಾರಂಭವಾಗಿದೆ ಎಂದು ಸಮಾಧಾನವಾಗುತ್ತದೆ. ಆದ್ದರಿಂದ, ದಯಮಾಡಿ ಮಾನ್ಯ ನೀರಾವರಿ ಸಚಿವರು ಮತ್ತು ಮಾನ್ಯ ಮುಖ್ಯಮಂತ್ರಿಗಳು ಈ ಭರವಸೆಯನ್ನು ಕೊಡಬಹುದೇ? ನಮ್ಮ ಕರ್ನಾಟಕ ಭಾಗದಲ್ಲಿ ನಾವು ಕೆಲಸವನ್ನು ಪ್ರಾರಂಭ ಮಾಡುತ್ತೇವೆ, ಅನುಮತಿ ಕೊಡುವವರೆಗೆ ನಾವು ಕಾಯುತ್ತೇವೆ, ಇಲ್ಲವೆಂದರೆ

ನಾವು ಮುಂದುವರೆಯುತ್ತೇವೆ, ಈ ರೀತಿಯಾದಂತಹ ಒಂದು ನಿಲುವನ್ನು ತೆಗೆದುಕೊಳ್ಳದಿದ್ದರೆ, ಇಡೀ ದೇಶದಲ್ಲಿ ಬೇರೆ ಬೇರೆ ರಾಜ್ಯಗಳಿಗೇ ಒಂದು ಕಾನೂನು, ಅವರು ಕಾನೂನು ಬಾಹಿರವಾಗಿ ಯಾವುದೇ ನೀರಾವರಿ ಯೋಜನೆಗಳನ್ನು ಮಾಡಬಹುದು, ಅಡ್ಡಿ-ಆತಂಕಗಳಿಲ್ಲ, ಕೇಂದ್ರ ಸರ್ಕಾರ ಕ್ಲಿಯರೆನ್ಸ್ ಕೊಡುತ್ತದೆ, ಆದರೆ ಇಲ್ಲಿ ನಮ್ಮ ರಾಜ್ಯಕ್ಕೆ ಅನುಮತಿ ಕೊಡುತ್ತಿಲ್ಲ. ಕುಡಿಯುವ ನೀರಿಗೆ ಆದ್ಯತೆ ಮೇಲೆ ಅನುಮತಿ ಕೊಡಬೇಕೆಂದು ಕೇಂದ್ರ ಸರ್ಕಾರ ಹೇಳಿದ್ದರೂ, ಅದಕ್ಕೆ ಅನುಮತಿ ಸಿಗುತ್ತಿಲ್ಲ. 45 ಟಿ.ಎಂ.ಸಿ. ನೀರಿನಲ್ಲಿ ನಾವು ಕೇಳುತ್ತಿರುವುದು ಕೇವಲ 8 ಟಿ.ಎಂ.ಸಿ. ಮಾತ್ರ ಕುಡಿಯುವ ನೀರಿಗೆ ನಮ್ಮಲ್ಲಿ ತೊಂದರೆ ಇದೆ. ಹುಬ್ಬಳ್ಳಿ-ಧಾರವಾಡದಲ್ಲಿ 10 ದಿವಸಕ್ಕೊಮ್ಮೆ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ ಎಂಬ ತಮ್ಮೆಲ್ಲರಿಗೂ ಗೊತ್ತಿರುವಂತದ್ದೇ ಆಗಿದೆ. ಅದಕ್ಕಾಗಿ ನೀವು ಇಷ್ಟು ಧೈರ್ಯಮಾಡಿ, ನಾವೆಲ್ಲಾ ನಿಮ್ಮ ಜೊತೆಗಿದ್ದೇವೆ. ಕೆಲಸವನ್ನು ನೀವು ಪ್ರಾರಂಭ ಮಾಡಿ. ಆಮೇಲೆ ಒತ್ತಾಯವನ್ನು ತರುವುದಕ್ಕೆ ನಾವು ನಿಮ್ಮ ಜೊತೆಗೆ ಬರುತ್ತೇವೆ. ಯಾವತ್ತೂ ನಿಮ್ಮ ಜೊತೆ ಇಂತಹ ವಿಷಯಗಳಲ್ಲಿ ರಾಜಕಾರಣ ಮಾಡುವುದಕ್ಕೆ ನಾವು ಹೋಗಿಲ್ಲ. ಆದ್ದರಿಂದ ದಯಮಾಡಿ ತಾವು ಕೆಲಸ ಪ್ರಾರಂಭ ಮಾಡುತ್ತೇವೆ ಎಂದು ಹೇಳಿ ಉಳಿದಿದ್ದನ್ನು ಆಮೇಲೆ ನೋಡೋಣ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಉಪಾಧ್ಯಕ್ಷರೆ, ಅಲ್ಲಿ ಯಾವ ರಾಜಕೀಯ ಪಕ್ಷಗಳೂ ಹೋರಾಟ ಮಾಡುತ್ತಿಲ್ಲ. ಪಕ್ಷಾತೀತವಾಗಿ ಅಲ್ಲಿ ಹೋರಾಟ ನಡೆಯುತ್ತಿದೆ. ಹೀಗಾಗಿ ಗೋವಾದ ಮುಖ್ಯಮಂತ್ರಿಗಳ ಜೊತೆಗೆ ತಾವು ಮಾತನಾಡಿ. ಇಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ ಎಂದರೆ, ಬಹುಶಃ ಯಾರೂ ಕೂಡ ಅದಕ್ಕೆ ಆಕ್ಷೇಪಿಸುವುದಿಲ್ಲ, ಬಹುಶಃ ಅದನ್ನು ಅವರು ಮಾನವೀಯ ದೃಷ್ಟಿಯಿಂದ ನೋಡಬಹುದು. ತಾವು ಮುಖ್ಯಮಂತ್ರಿಗಳ ಜೊತೆಗೂ ಕೂಡ ಮಾತನಾಡಿ, ಅವರನ್ನು convince ಮಾಡಿದರೆ, ಅವರೂ ಸಹ ಅದಕ್ಕೆ ಒಪ್ಪಿಕೊಳ್ಳಬಹುದು. ಇದರಲ್ಲಿ ಬಹಳಷ್ಟು ಸಮಸ್ಯೆ ಇಲ್ಲ. ಏಕೆಂದರೆ, 21ನೇ ತಾರೀಖಿನ ನಂತರ, ಬಹುಶಃ ಅಲ್ಲಿ ನಾವ್ಯಾರೂ ಜನ ಪ್ರತಿನಿಧಿಗಳು ಹೋಗಲಿಕ್ಕಾಗುವುದಿಲ್ಲ, ಮಂತ್ರಿಗಳೂ ಸಹ ಹೋಗಲಿಕ್ಕಾಗುವುದಿಲ್ಲ. ಅಷ್ಟೊಂದು ಗಂಭೀರವಾದಂತಹ ಪರಿಸ್ಥಿತಿ ಅಲ್ಲಿ

ನಿರ್ಮಾಣವಾಗಿದೆ. 15 ದಿವಸಗಳ ಹಿಂದೆ ಅಲ್ಲಿ ದೊಡ್ಡದೊಂದು ಮೆರವಣಿಗೆ ಆದಂತಹ ಸಂದರ್ಭದಲ್ಲಿ 10 ಸಾವಿರ ಜನರು ಸೇರಿದ್ದರು. ಅಲ್ಲಿದ್ದ ಜನರನ್ನು ನಮಗೇ ಕಂಟ್ರೋಲ್ ಮಾಡಲಿಕ್ಕಾಗಲಿಲ್ಲ. ಅಷ್ಟೊಂದು ಗಂಭೀರವಾದಂತಹ ಪರಿಸ್ಥಿತಿ ಆ ಭಾಗದಲ್ಲಿದೆ. ಅದಕ್ಕಾಗಿ ದಯವಿಟ್ಟು ಸರ್ಕಾರ ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಗೋವಾದ ಮುಖ್ಯಮಂತ್ರಿಗಳ ಜೊತೆಗೂ ಸಹ ಮಾತನಾಡಿ All party delegation ತೆಗೆದುಕೊಂಡು ಮಾನ್ಯ ಪ್ರಧಾನ ಮಂತ್ರಿಗಳ ಬಳಿಗೂ ಕೂಡ ಹೋಗೋಣ. ಎಲ್ಲಾ ರೀತಿಯಿಂದಲೂ ಒತ್ತಡ ತರುವಂತಾದ್ದು ಮತ್ತು ತಕ್ಷಣವೇ ಕಾಮಗಾರಿ start ಮಾಡುವಂತಾದ್ದು, ಇದನ್ನು ಮಾಡಿದರೆ ಒಂದು ರೀತಿ ಬಿಸಿ ಆಗುತ್ತದೆ. ಆಗ ಗೋವಾದವರೂ ಸಹ ತಮ್ಮ ಜೊತೆಗೆ ಮಾತನಾಡಲಿಕ್ಕೆ ಬರುತ್ತಾರೆ. ಕೇಂದ್ರ ಸರ್ಕಾರದವರೂ ಸಹ ಬರುತ್ತಾರೆ. ಕಾಮಗಾರಿ start ಮಾಡುವುದಕ್ಕೆ ಸರ್ಕಾರ ನಿಲುವನ್ನು ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಇದು ನಿಜವಾಗಿಯೂ ನಮ್ಮ ಭಾಗದಲ್ಲಿ ಒಂದು ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಇದರಲ್ಲಿ ಎರಡನೇ ಮಾತಿಲ್ಲ. ಸರ್ಕಾರ ಈಗಾಗಲೇ ಸ್ಪಂದಿಸಿದೆ. ಹಿಂದೆ ಕೂಡ, ಏನು ಇವತ್ತಿನ ಸರ್ಕಾರವೇ ಅಲ್ಲಿ ಸ್ಟೇ ಕೊಟ್ಟಿದೆ ಎಂದಲ್ಲ, ಹಿಂದಿನ ಎನ್.ಡಿ.ಎ. ಸರ್ಕಾರ ಇದ್ದಾಗಲೂ ಕೂಡ, ಅದು ಈ ರೀತಿಯಾಗಿ ಆಗಬೇಕಾಗಿತ್ತು. ಆಗಲೂ ಕೂಡ ಆಗಲಿಲ್ಲ. ಆದರೆ ಇವತ್ತಿನ ದಿವಸ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ, ಅಲ್ಲಿ ಕೆಲಸವನ್ನೇ ಚಾಲೂ ಮಾಡಿ ಎಂದು ಹೇಳುವುದು ಎಷ್ಟರಮಟ್ಟಿಗೆ ಸಮಂಜಸ, ಅದು ನನಗೆ ಒಪ್ಪಿಗೆಯಾಗುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಬಹಳ ಸ್ಪಷ್ಟವಾಗಿ ಈಗಾಗಲೇ ಭರವಸೆ ನೀಡಿದ್ದಾರೆ. ಇನ್ನೊಮ್ಮೆ ಹೋಗಿ ಬನ್ನಿ. ಮಾನ್ಯ ಪ್ರಧಾನ ಮಂತ್ರಿಗಳನ್ನು ಎಲ್ಲಾ ಸರ್ವ ಪಕ್ಷಗಳ ನಿಯೋಗ ಹೋಗಿ ಭೇಟಿಯಾಗಬೇಕೆಂದು ಈಗಾಗಲೇ ನಿರ್ಣಯವಾಗಿದೆ. ನಾವು ಒಮ್ಮೆಲೆ, ಆಂಧ್ರದವರು ಹಾಗೆ ಮಾಡಿದ್ದಾರೆ, ಹೀಗೆ ಮಾಡಿದ್ದಾರೆ, ನಾವೂ ಸಹ ಹಾಗೆಯೇ ಮಾಡೋಣ ಎಂದು ಹೇಳುವುದು ಅಷ್ಟೊಂದು ಸಮಂಜಸವೆಂದು ನನಗಂತೂ ಅನಿಸುವುದಿಲ್ಲ. ಸದ್ಯ ಇನ್ನೊಮ್ಮೆ ಹೋಗಿ

ಬನ್ನಿ. ಅದನ್ನೆಲ್ಲಾ ಭೇಟಿಯಾಗಿ ಹೇಳಿ. ನಾವು ಹೀಗೆ ಮಾಡುತ್ತೇವೆ ಎಂದು ಹೇಳಿ. ನೀವು ಒಂದು ವೇಳೆ ಈ ಸಲ ಇದನ್ನು ಮಾಡದಿದ್ದರೆ, ನಾವು ಕೆಲಸ ಚಾಲೂ ಮಾಡುತ್ತೇವೆ ಎನ್ನುವಂತಹ ಮಾತನ್ನೂ ಸಹ ಈ ಸಲ ಅವರಿಗೆ ಹೇಳಿ ಬನ್ನಿ. ಇದೊಂದು ಸಲ ಟೈಮ್ ಕೊಟ್ಟು, ದಯವಿಟ್ಟು ತಾವು ಹೋಗಿ. ಅದು ಆಗದಿದ್ದರೆ, ಮುಂದೆ ಈ ಸದನದಲ್ಲಿ ಏನು ಮಾಡಬೇಕೆಂದು ನಾವೆಲ್ಲರೂ ಒಮ್ಮತವಾಗಿ, ಕಠಿಣವಾದಂತಹ ನಿಲುವನ್ನು ತೆಗೆದುಕೊಳ್ಳಬಹುದು ಎಂಬುದು ನನ್ನ ಭಾವನೆಯಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಮತ್ತು ಮಾನ್ಯ ಶೆಟ್ಟರ್‌ರವರು ಏನು ಪ್ರಸ್ತಾಪ ಮಾಡಿದ್ದಾರೆ, ಇದರಲ್ಲಿ ಎರಡನೇ ಮಾತಿಲ್ಲ. ನಾವು ನೂರಕ್ಕೆ ನೂರು ತಾವು ಹೇಳಿದಂತಹ ಮಾತುಗಳನ್ನು ಒಪ್ಪಿಕೊಳ್ಳುತ್ತೇವೆ. ಈ ಪ್ರಾಜೆಕ್ಟ್ ಅನ್ನು ಯಾವುದೇ ರೀತಿಯಿಂದ ಇಂಪ್ಲಿಮೆಂಟ್ ಮಾಡಬೇಕು ಎನ್ನತಕ್ಕಂಥದ್ದೇ ನಮ್ಮ ಗುರಿ. ಆದರೆ ಕೇಂದ್ರ ಸರ್ಕಾರ ಸ್ಟೇ ಕೊಟ್ಟಿದ್ದಕ್ಕಾಗಿ, ಇದನ್ನು violate ಮಾಡಿದರೆ ಇದರ ಪರಿಣಾಮ ಏನು ಆಗಬಹುದು. ಅಥವಾ ಬೇರೆ ಏನಾದರೂ ಪ್ರಾಜೆಕ್ಟ್‌ಗಳ ಮೇಲೆ ನಾಳೆ ಪರಿಣಾಮ ಬೀರಬಹುದೇನೋ, ಅಥವಾ ಇದಕ್ಕೆ ಸೀಮಿತವಾಗಿ ಏನಾದರೂ ಕೇಂದ್ರ ಸರ್ಕಾರ ಒಂದು ನಿಲುವನ್ನು ತೆಗೆದುಕೊಂಡರೆ ಒಂದು ತರಹ, ಇಲ್ಲದಿದ್ದರೆ ನಮ್ಮ ಮಾತನ್ನೇ ಕೇಳಲಿಲ್ಲ ಎಂದು ನಾಳೆ ಏನಾದರೂ ಮಾಡತಕ್ಕಂಥದ್ದು ಆಗಬಹುದು. ಏಕೆಂದರೆ, ಅನೇಕ ಸಾರಿ emotional ನಲ್ಲಿ ನಾವು ನಿರ್ಣಯಗಳನ್ನು ತೆಗೆದುಕೊಂಡು, ಆಮೇಲೆ ಪಶ್ಚಾತ್ತಾಪ ಪಡತಕ್ಕಂಥದ್ದು ಬೇಡ. ಈಗ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟಪಡಿಸಿದ್ದಾರೆ. ನನ್ನ ನೇತೃತ್ವದಲ್ಲಿ ನಾವೆಲ್ಲರೂ ಕೂಡ ಸರ್ವ ಪಕ್ಷಗಳ ನಿಯೋಗ ಹೋಗೋಣ, ಇನ್ನೊಂದು ಸಾರಿ ಒತ್ತಾಯ ಮಾಡೋಣ, ಮನವರಿಕೆ ಮಾಡಿಕೊಡೋಣ, ಕೇವಲ ಕುಡಿಯುವ ನೀರಿಗಾಗಿ ಈ ಪ್ರಾಜೆಕ್ಟ್ ಅನ್ನು ಮಾಡುತ್ತಿದ್ದೇವೆ, ಬೇರೆ ಯಾವುದೇ ಉದ್ದೇಶಕ್ಕಾಗಿ ಇದಿಲ್ಲ ಅನ್ನತಕ್ಕಂಥದ್ದನ್ನೂ ಕೂಡ ಸ್ಪಷ್ಟಪಡಿಸೋಣ ಎಂದು ಅವರು ಹೇಳಿದ್ದಾರೆ. ಬಹುಶಃ ಅವರ ನೇತೃತ್ವದಲ್ಲಿ ನಾವೆಲ್ಲರೂ ಕೂಡ ಹೋಗಿ, ಮನವರಿಕೆ ಮಾಡಿಕೊಡೋಣ. ಎರಡನೆಯದಾಗಿ, ಗೋವಾ ಮುಖ್ಯಮಂತ್ರಿಗಳ ಜೊತೆಗೂ ಕೂಡ ಮಾತನಾಡೋಣ ನೀವು ಇಂತಹವರ

ಜೊತೆಗೆ ಮಾತನಾಡಿ ಎಂದು ಹೇಳಿದರೆ ಸಾಕು, ಮಾನ್ಯ ಮುಖ್ಯಮಂತ್ರಿಗಳು ಅವರ ಜೊತೆಗೆ ಮಾತು ಆಡಿಯೇ ಆಡುತ್ತಾರೆ. ಅವರು ನಿಮ್ಮ ಮಾತನ್ನು ಎಂದು ಮೀರುತ್ತಾರೆ? ಮಾನ್ಯ ಯಡಿಯೂರಪ್ಪನವರು ಮತ್ತು ನಿಮ್ಮ ಮಾತನ್ನು ಅವರು ಮೀರುತ್ತಾರೆಯೇ ? ಬೇಕಾದರೆ ಅವರು ನಮ್ಮ ಮಾತು ಮೀರಬಹುದು, ನಿಮ್ಮ ಮಾತನ್ನು ಅವರು ಮೀರುವುದೇ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಒಳ್ಳೆಯದು ಆಯಿತು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ತಮ್ಮ ಮಾತನ್ನು ಅವರು ಕೇಳಿಯೇ ಕೇಳುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಗೋವಾದ ಮುಖ್ಯಮಂತ್ರಿಗಳು ಜೊತೆಗೆ ಮಾತನಾಡುವುದಕ್ಕೂ ಕೂಡ ಬೇಕಾದರೆ, ನಾನು ಇವತ್ತೇ ಅವರಿಗೆ ಹೇಳುತ್ತೇನೆ. ಆದರೆ ಕೊನೆಗೆ ಅವರೂ ಕೂಡ ಏನು ಮಾಡುತ್ತಾರೆ? ತಮಗೆ ಗೊತ್ತಿದ್ದಂತೆ, ರಾಜಕೀಯವಾಗಿ ಉದ್ದೇಶವನ್ನಿಟ್ಟುಕೊಂಡು, ಇದು ಆಗುವುದಿಲ್ಲ, ಮಾಡುವುದಿಲ್ಲ ಅನ್ನತಕ್ಕಂಥ ಮತನ್ನು ಅವರು ಹೇಳಬಹುದು. ಅವರು ಏನು ಹೇಳಿದರೂ ಸಹಿತ ನಮ್ಮ ಪ್ರಯತ್ನವನ್ನು ನಾವು ಮಾಡೋಣ. ಇದರಲ್ಲಿ ಎರಡನೇ ಮಾತಿಲ್ಲ. ಇದರಲ್ಲಿ ಹಿಂಜರಿಯತಕ್ಕಂಥದ್ದು ಕೂಡ ಇಲ್ಲ ರೈತರಿಗೆ ತೊಂದರೆ ಆಗಬಾರದು. ನಾನು ರೈತರಲ್ಲಿ appeal ಮಾಡುತ್ತೇನೆ. Emotional issue ಆಗಿ ಇದು convert ಆದರೆ ಇದೊಂದು ಬೇರೆಯದೇ ಆದಂತಹ ಪರಿಣಾಮಗಳನ್ನು ಬೀರುತ್ತದೆ. ಅದಕ್ಕಾಗಿ ದಯವಿಟ್ಟು ಚಳವಳಿಯನ್ನು withdraw ಮಾಡಿಕೊಳ್ಳಿ ಎಂದು ತಾವೂ ಕೂಡ ಹೇಳಿ, ನಾವೂ ಕೂಡ ಅವರಲ್ಲಿ appeal ಮಾಡುತ್ತೇವೆ. ಇದು ನಿಜ. ಮಾನ್ಯ ಯಡಿಯೂರಪ್ಪನವರು ಹೇಳಿದಂತೆ, ತಾವೂ ಕೂಡ ಪ್ರಸ್ತಾಪ ಮಾಡಿದಂತೆ, ಕೆಲವು ಜನ ಕಾನೂನು ತಮ್ಮ ಕೈಯಲ್ಲಿ ತೆಗೆದುಕೊಂಡು ಮಾಡತಕ್ಕಂಥವರೂ ಕೂಡ ಇದ್ದಾರೆ. ಜಿಸ್ ಕೀ ಲಾಠಿ, ಒಸ್‌ಕಿ ಬೈಸ್ ಎಂದು ನಮ್ಮ ಕಡೆಗೆ ಹೇಳುತ್ತಾರೆ. ಯಾರ ಕೈಯ್ಯಲ್ಲಿ ಬಡಗಿ ಇರುತ್ತದೋ, ಅವನದೇ ಎಮ್ಮೆ ಅದು, ಅವನು ಹೊಡೆದುಕೊಂಡು ಹೋಗಬಹುದು. ಆ ರೀತಿಯಲ್ಲಿ ಕೆಲವು ಜನ ಮಾಡುತ್ತಿದ್ದಾರೆ. ಆ ದಿಕ್ಕಿನಲ್ಲಿ ಮಾಡುವುದಕ್ಕೆ ನಮಗೆ ಎಷ್ಟರಮಟ್ಟಿಗೆ ಸಾಧ್ಯ ಎಂಬುದರ ಸಾಧಕ ಬಾಧಕಗಳನ್ನು ನೋಡಿಕೊಂಡು, ನಮ್ಮ law department ಮತ್ತು ಬೇರೆ ಎಲ್ಲರ ಜೊತೆಯಲ್ಲಿ ಚರ್ಚೆ

ಮಾಡಿ, ಯಾವ ರೀತಿಯಾಗಿ ಅದನ್ನು ಮುಂದುವರೆಸಬೇಕು ಅನ್ನತಕ್ಕಂಥದ್ದರ ಬಗ್ಗೆ, ಆ ಚಿಂತನೆಯನ್ನು ಬೇರೆ ರೀತಿಯಲ್ಲಿ ಮಾಡೋಣ. ಆದರೆ ಈಗ ಪ್ರಾಜೆಕ್ಟ್ ದೃಷ್ಟಿಯಿಂದ, ಮಾನ್ಯ ಮಂತ್ರಿಗಳು ಈಗಾಗಲೇ ಭರವಸೆ ಕೊಟ್ಟಿದ್ದಾರೆ. ಆ ಒಂದು ಭರವಸೆಯ ಮೇಲೆ ಇವತ್ತು ಅಲ್ಲಿ ಚಳವಳಿಯನ್ನು ಕೈ ಬಿಟ್ಟು, ಮುಂದಿನ ಒಂದು ನಮ್ಮ representationsಗೆ ಅನುಕೂಲ ಮಾಡಿಕೊಡಬೇಕೆಂದು ಹೇಳಿ, ಮತ್ತೊಮ್ಮೆ ನಾನು ಅವರಿಗೆ ಕೇಳಿಕೊಳ್ಳುತ್ತೇನೆ.

3. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು :

(ಅ) ವಿಷಯ:– ಐ.ಪಿ. ಸೆಟ್‌ಗಳ ಅಕ್ರಮ ಸಕ್ರಮ ಮಾಡುವ ಬಗ್ಗೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ಇಡೀ ರಾಜ್ಯಕ್ಕೆ ಸಂಬಧಪಟ್ಟ ವಿಷಯವನ್ನು ನಾನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಇಲ್ಲಿ ಕುಳಿತಿರುವ ನಾವುಗಳ್ಯಾರೂ ನಮ್ಮ ನಮ್ಮ ಕ್ಷೇತ್ರಗಳಿಗೆ ಹೋಗುವುದಕ್ಕೇ ಆಗದಂಥ ಪರಿಸ್ಥಿತಿ ಬಂದೊದಗಿದೆ. ಈಗ ಅಕ್ರಮ – ಸಕ್ರಮ ಎಂದು ಮಾಡುವುದಕ್ಕೆ ಜನರಿಂದ ಸಾಕಷ್ಟು ಕೋಟ್ಯಾಂತರ ರೂಪಾಯಿಗಳನ್ನು ಕಟ್ಟಿಸಿಕೊಳ್ಳಲಾಗಿದೆ. ಅದಕ್ಕೆ ಸಂಬಂಧಪಟ್ಟಂತೆ ಕಂಬಗಳನ್ನು ಹಾಕಿಲ್ಲ. ವೈರ್‌ಗಳನ್ನು ಎಳೆಯಲಿಲ್ಲ. ಮತ್ತು ಟಿ. ಸಿ.ಗಳನ್ನೂ ಹಾಕಿಲ್ಲ. ಇದರ ಪರಿಣಾಮವಾಗಿ "ಓವರ್ ಲೋಡ್ ಆಗಿ ಟಿ.ಸಿ. ಗಳು ಸುಡುತ್ತಿವೆ. ಇವೊತ್ತು ಸಾಗರ ಸಭೆ– ಡಿವಿಶನ್ ಒಂದರಲ್ಲಿಯೇ 120 ಟಿ.ಸಿ. ಗಳು ಸುಟ್ಟಿವೆ. ನೀವು ಬೇಕಾದರೆ ಈಗಲೇ ಫೋನ್‌ಮಾಡಿ ಕೇಳಿ. ಇವುಗಳು ಇನ್ನೂ ರಿಪೇರಿ ಆಗಿಲ್ಲ. ಅದ್ಯಾವೋನೋ ಒಬ್ಬ ಭದ್ರಾವತಿಯವನೊಬ್ಬ ಟೆಂಡರ್ ಹಿಡಿದು ಕೊಂಡಿದ್ದಾನೆ. ಬೇರೆ ಯಾವ ಕಂಟ್ರ್ಯಾಕ್ಟರ್ ಕೂಡ ರಿಪೇರಿ ಮಾಡುವುದಕ್ಕೆ ಮುಂದೆ ಬರುತ್ತಿಲ್ಲ. ಏಕೆಂದರೆ ರಿಪೇರಿ ಮಾಡಿದರೂ "ಓವರ್‌ಲೋಡ್ ಆಗಿ ಟಿ. ಸಿ. ಸುಟ್ಟರೆ ನಾನು ರಿಪೇರಿ ಮಾಡಿಕೊಟ್ಟರೂ ಎಂಟೈರ್ ಟಿ. ಸಿ. ಗಳೆಲ್ಲವೂ ಸುಡಬಹುದಾದ ಕಾರಣ ಆ ಜವಾಬ್ದಾರಿಯನ್ನು ನಾವೇಕೆ ತೆಗೆದುಕೊಳ್ಳಬೇಕು ಎಂದು ಯಾವ ಕಂಟ್ರ್ಯಾಕ್ಟರ್ ಕೂಡ ಮುಂದೆ ಬರುತ್ತಿಲ್ಲ. ಹೀಗಾಗಿ ಯಾರು ಗುತ್ತಿಗೆ ಹಿಡಿದಿದ್ದಾನೋ ಅವನೇ ಈ 120 ಟಿ.ಸಿ. ಗಳನ್ನೂ ರಿಪೇರಿ ಮಾಡಿ ಕೊಡುವುದಕ್ಕೆ ಇನ್ನೂ ಮೂರು ತಿಂಗಳು ಬೇಕಾಗುತ್ತದೆ. ಇನ್ನು ಎರಡನೆಯದಾಗಿ ಕುಡಿಯುವ ನೀರಿಗೆ ಇನ್ನು 15 ಅಥವಾ 20 ದಿವಸದೊಳಗೆ ರಿಪೇರಿ ಮಾಡಿಕೊಡುತ್ತೇವೆ